ಹುಬ್ಬಳ್ಳಿ-ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ, ಕೊಪ್ಪಳ, ವಿಜಯನಗರ, ಬೆಳಗಾವಿ, ದಾವಣಗೆರೆ, ರಾಯಚೂರ, ಯಾದಗಿರಿ

ಪಬ್ಲಿಕ್ ಫಾಸ್ಟ್ 31

PUBLIC FAST

ಕನ್ನಡ ದಿನಪತ್ರಿಕೆ

ಧ್ವನಿ ನಿಮ್ಮದು ಸಹಾಯ ನಮ್ಮದು... DAILY NEWS PAPER

E-mail : publicfast31@gmail.com

ಸಂಪಾದಕರು : ಐಶ್ವರ್ಯ ಪಿ. ಉಪ ಸಂಪಾದಕರು : ಇಮ್ರಾನ್ ಹೆಬ್ಬಳ್ಳಿ

● ಸಂಪುಟ : 01 ● ಸಂಚಿಕೆ : 135 ● ದಿನಾಂಕ : 06-10-2026 ಮಂಗಳವಾರ KNKAN/26/A2600 ಪುಟ : 4 ಬೆಲೆ : ರೂ. 2 Mobile : 9916890865

ಕೆಪಿಎಸ್‌ಸಿ ಕರ್ಮಕಾಂಡ: ಅಂಕಗಳ ಮಾಹಿತಿ ತಡೆಹಿಡಿದು ಲಂಚದ ಡೀಲ್

ಬೆಂಗಳೂರು : ಕರ್ನಾಟಕ ಲೋಕಸೇವಾ ಆಯೋಗದ ನೇಮ ಕಾತಿ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳ ಅಂಕಗಳ ಮಾಹಿತಿಯನ್ನು ಉದ್ದೇಶಪೂರ್ವಕವಾಗಿತಡೆಹಿಡಿದು,ಅದನ್ನೇ ಲಂಚದ ಮಾತುಕತೆಗೆ ಬಳಸಲಾಗುತ್ತಿತ್ತೆಂಬ ಗಂಭೀರ ಆರೋಪ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಮಾಜಿ ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ, ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರ ಬಂಧನದ ಬಳಿಕ ಜಾರಿ ನಿರ್ದೇಶನಾಲಯ ಈ ಅಂಶಗಳನ್ನು ವಿಶೇಷ ನ್ಯಾಯಾಲಯದ ಗಮನಕ್ಕೆ ತಂದಿದೆ.

2024ರಿಂದ 2026ರವರೆಗೆ ಗಂಗ್ವಾರ್ ಪರೀಕ್ಷಾ ನಿಯಂತ್ರಕರಾಗಿದ್ದ ಅವಧಿಯಲ್ಲಿ ನಡೆದ 13 ನೇಮಕಾತಿ ಪ್ರಕ್ರಿಯೆಗಳಲ್ಲೂ ವ್ಯವಸ್ಥಿತವಾಗಿ ಅಕ್ರಮ ಹಣ ವಸೂಲಿ ನಡೆದಿದೆಯೇ ಎಂಬುದನ್ನು ತನಿಖೆ ಮಾಡಬೇಕಿದೆ ಎಂದು ಇ ಡಿ ನ್ಯಾಯಾಲಯಕ್ಕೆ ತಿಳಿಸಿದೆ. ಪ್ರತಿ ಹುದ್ದೆಗೆ ಮೂವರು ಅಭ್ಯರ್ಥಿಗಳನ್ನು ಒಳಗೊಂಡಿರುವ 1:3 ಅರ್ಹತಾ ಪಟ್ಟಿಯಲ್ಲಿ ಸಾಮಾನ್ಯವಾಗಿ ಅಭ್ಯರ್ಥಿಗಳ ಹೆಸರು ಮತ್ತು ರೋಲ್ ನಂಬರ್‌ಗಳಿದ್ದರೂ, ಅಂಕಗಳನ್ನು ಬಹಿರಂಗಪಡಿಸದಿರುವ ಪದ್ಧತಿ ಜಾರಿಯಲ್ಲಿತ್ತು ಎಂದು ಇ ಡಿ ಹೇಳಿದೆ.

ಇದರಿಂದ ಅಭ್ಯರ್ಥಿಯ ನಿಖರ ಸ್ಥಾನಮಾನವನ್ನು ಸಾರ್ವ ಜನಿಕವಾಗಿ ತಿಳಿದುಕೊಳ್ಳಲು ಸಾಧ್ಯವಾಗು ತ್ತಿರಲಿಲ್ಲ. ಆದರೆ ಕೆಪಿಎಸ್‌ಸಿಯೊಳಗಿನ ಕೆಲವರು ಗಂಗ್ವಾರ್ ಅವರಿಂದ ಅಭ್ಯರ್ಥಿಗಳ ಕಾರ್ಯಕ್ಷಮತೆ ಮತ್ತು ಅಂಕಗಳ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದರು ಎಂದು ತನಿಖಾ ಸಂಸ್ಥೆ ಆರೋಪಿಸಿದೆ.

ಅಭ್ಯರ್ಥಿಯ ಆಯ್ಕೆಯ ಸಾಧ್ಯತೆ ಎಷ್ಟಿದೆ ಎಂಬುದು ತಿಳಿದ ಬಳಿಕ, ಸಂಬಂಧಪಟ್ಟ ಅಧಿಕಾರಿ, ಸದಸ್ಯ ಅಥವಾ ಮಧ್ಯವರ್ತಿ ಅಭ್ಯರ್ಥಿಯನ್ನು ಸಂಪರ್ಕಿಸಿ ಲಂಚದ ಮೊತ್ತದ ಬಗ್ಗೆ ಮಾತುಕತೆ ನಡೆಸುತ್ತಿದ್ದರು. ಆಯ್ಕೆಯಾಗುವ ಸಾಧ್ಯತೆ ಹೆಚ್ಚಿದ್ದಷ್ಟೂ ಬೇಡಿ-ಕೆಯ ಮೊತ್ತವೂ ಹೆಚ್ಚಾಗುತ್ತಿತ್ತು ಎಂದು ಉಈ ನ್ಯಾಯಾಲಯಕ್ಕೆ ತಿಳಿಸಿದೆ.



ಪಶುವೈದ್ಯಾಧಿಕಾರಿ ನೇಮಕಾತಿ ಯಲ್ಲೂ ಇದೇ ಮಾದರಿ? :

400 ಪಶುವೈದ್ಯಾಧಿಕಾರಿಗಳ ನೇಮಕಾತಿಗಾಗಿ 2026ರ ಜನವರಿ 8 ಮತ್ತು 9ರಂದು ನಡೆದ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಗಂಗ್ವಾರ್ ಪ್ರಮುಖ ಆರೋಪಿಯಾಗಿದ್ದಾರೆ. ಈ ಪ್ರಕರಣದಲ್ಲಿ ಮಧ್ಯವರ್ತಿಯೊಬ್ಬರು ಕನಿಷ್ಠ 20 ಅಭ್ಯರ್ಥಿಗಳಿಂದ ತಲಾ 20 ಲಕ್ಷದಿಂದ 40 ಲಕ್ಷದವರೆಗೆ ಹಣ ಸಂಗ್ರಹಿಸಿದ್ದರೆಂಬ ಆರೋಪವನ್ನು ಇಡಿ ಮುಂದಿಟ್ಟಿದೆ.

ಫೆಬ್ರವರಿ 4ರಂದು ಪಶು ವೈದ್ಯಾಧಿಕಾರಿಗಳ 1:3 ಅರ್ಹತಾ ಪಟ್ಟಿ ಪ್ರಕಟವಾದ ಬಳಿಕ, ಅಮಾನತುಗೊಂಡ ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಸೇರಿದಂತೆ ಕೆಲ ಅಧಿಕಾರಿಗಳು ಅಭ್ಯರ್ಥಿಗಳ ಆಯ್ಕೆಯ ಸಾಧ್ಯತೆಗಳನ್ನು ತಿಳಿದುಕೊಳ್ಳಲು ಗಂಗ್ವಾರ್ ಅವರನ್ನು ಸಂಪರ್ಕಿಸಿದ್ದರು ಎಂದು ವಿಚಾರಣೆಯಲ್ಲಿ ಗಂಗ್ವಾರ್ ಹೇಳಿಕೆ ನೀಡಿ-ದ್ದಾರೆ ಎಂದು ಇ ಡಿ ತಿಳಿಸಿದೆ. ಬಿ.ವಿ.ಗೀತಾ, ಶಾಂತಾ ಹೊಸಮನಿ, ಎಲ್ಫ್ರೆಡಾ ಡಿ ಸಿಲ್ವಾ ಸೇರಿದಂತೆ ಕೆಲ ಸದಸ್ಯರುಗಳ ಹೆಸರುಗಳನ್ನೂ ತನಿಖೆಯ ಸಂದರ್ಭದಲ್ಲಿ ಉಲ್ಲೇಖಿಸಲಾಗಿದೆ. ಅಧಿಕಾರಿಯೊಬ್ಬರ ನಿವಾಸದಿಂದ ವಶಪಡಿಸಿಕೊಂಡ ಕೈಬರಹದ ಟಿಪ್ಪಣಿಗಳಲ್ಲಿ ಲಂಚ ನೀಡಿದರೂ ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆಯಲು ವಿಫಲರಾದ ಅಭ್ಯರ್ಥಿಗಳ ವಿವರಗಳಿದ್ದವು ಎಂದು ಇಡಿ ಹೇಳಿದೆ.

13 ನೇಮಕಾತಿಗಳತ್ತ ಇ ಡಿ ಕಣ್ಣು :

ಗಂಗ್ವಾರ್ ಅವರ ಅವಧಿಯಲ್ಲಿ ನಡೆದ 13 ನೇಮಕಾತಿ ಪ್ರಕ್ರಿಯೆಗಳಲ್ಲಿ ಅಕ್ರಮ ಹಣ ಸಂಗ್ರಹವಾಗಿದೆಯೇ, ಯಾರೆಲ್ಲ ಇದರಲ್ಲಿ ಭಾಗಿಯಾಗಿದ್ದಾರೆ ಮತ್ತು ಹಣದ ವಹಿವಾಟು ಹೇಗೆ ನಡೆದಿದೆ? ಎಂಬುದರ ಕುರಿತು ಸಮಗ್ರ ತನಿಖೆ ಅಗತ್ಯವಿದೆ ಎಂದು ಇ ಡಿ ವಾದಿಸಿದೆ. ಆದರೆ, ಉಳಿದ 13 ನೇಮಕಾತಿ ಪ್ರಕ್ರಿಯೆಗಳಿಗೆ ಪ್ರತ್ಯೇಕ ಎಫ್‌ಐಆರ್ ದಾಖಲಾಗಿಲ್ಲದ ಕಾರಣ ಪಿಎಂಎಲ್‌ಎ ಅಡಿಯಲ್ಲಿ ಇ ಡಿ ತನಿಖೆಯ ವ್ಯಾಪ್ತಿ ಪಶುವೈದ್ಯಾಧಿಕಾರಿ ನೇಮಕಾತಿ ಪ್ರಕರಣಕ್ಕೆ ಮಾತ್ರ ಸೀಮಿತವಾಗಬೇಕು ಎಂದು ಗಂಗ್ವಾರ್ ಪರ ವಕೀಲರು ವಾದಿಸಿದ್ದಾರೆ. ಇದಕ್ಕೆ ಪ್ರತಿಯಾಗಿ, ಗಂಗ್ವಾರ್ ಅವರ ಅಧಿಕಾರಾವಧಿಯಲ್ಲಿನಡೆದವಿವಿಧನೇಮಕಾತಿ ಪ್ರಕ್ರಿಯೆಗಳುನಿರಂತರಅಕ್ರಮಹಣವರ್ಗಾವಣೆ ಅಪರಾಧದ ಭಾಗವಾಗಿರಬಹುದು ಎಂದು ಇ ಡಿ ಪ್ರತಿಪಾದಿಸಿದೆ.

ನಮೂನೆ-7ಯಲ್ಲಿ ಯಾವುದೇ ಲೋಪವಿಲ್ಲ: ರಾಜ್ಯ ಮುಖ್ಯ ಚುನಾವಣಾಧಿಕಾರಿ ಸ್ಪಷ್ಟನೆ

ಬೆಂಗಳೂರು : ಭಾರೀ ಚರ್ಚೆಗೆ ಗ್ರಾಸವಾಗಿರುವ ನಮೂನೆ 7ರ ಕುರಿತಂತೆ ಚುನಾವಣಾ ಆಯೋಗ ಸ್ಪಷ್ಟ ಮಾತುಗಳಲ್ಲಿ ಯಾವುದೇ ಲೋಪ ಉಂಟಾಗಿಲ್ಲ ಮತ್ತು ಯಾವುದೇ ಹೆಸರನ್ನು ಕೈಬಿಟ್ಟಿಲ್ಲ ಎಂದು ಸ್ಪಷ್ಟಪಡಿಸಿದೆ.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ರಾಜ್ಯ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ಅವರು, ನಮೂನೆ 7ಸಲ್ಲಿಸಿದ ನಂತರ ಪೂರ್ಣ ಪ್ರಮಾಣದಲ್ಲಿ ಅದನ್ನು ಪರಿಶೀಲಿಸಲಾಗುತ್ತದೆ ಮತ್ತು ತಕ್ಷಣದಲ್ಲೇ ಯಾವುದೇ ಮತದಾರರ ಹೆಸರನ್ನು ಕೈಬಿಡುವ ಸಾಧ್ಯತೆಯೇ ಇಲ್ಲ ಎಂದು ತಿಳಿಸಿದರು.

ಈಗಾಗಲೇ ಶೇ.85ರಷ್ಟು ಈ ಪ್ರಕ್ರಿಯೆ ಮುಗಿದಿದ್ದು, ಅ.27ರಂದು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಹೇಳಿದರು.

ಒಂದು ದಿನಕ್ಕೆ 10ರಷ್ಟು ನಮೂನೆ 7 ನೀಡಬಹುದು. ಬಿಎಲ್‌ಎಗಳು 50 ಫಾರಂಗಳನ್ನು ಮಾತ್ರ ನೀಡಬಹುದು. ಅದಕ್ಕಿಂತ ನೀಡಲು ಸಾಧ್ಯವಿಲ್ಲ. ಆದರೂ ಸಾಮೂಹಿಕವಾಗಿ ನಮೂನೆ 7ನ್ನು ಹೆಚ್ಚಾಗಿ



ನೀಡಿದ್ದರೆ ಇಆರ್‌ಒಗಳು ಅದರ ಬಗ್ಗೆ ಪರಿಶೀಲಿಸುತ್ತಾರೆ ಎಂದು ಅವರು ತಿಳಿಸಿದರು. ಉದ್ದೇಶಪೂರ್ವಕವಾಗಿ ತಪ್ಪುಗಳಾಗಿದ್ದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಬಹುದು. ಇದುವರೆಗೆ ನಮೂನೆ 7ಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಈವರೆಗೆ 91,278 ನಮೂನೆ 7 ಸಲ್ಲಿಕೆಯಾಗಿದೆ. 4,667 ನಮೂನೆ 6ಎ ಸಲ್ಲಿಕೆಯಾಗಿದೆ. ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಅವರಿಗೆ ಅನ್ಯಾಯವಾಗುವುದಿಲ್ಲ.

ಎಸ್‌ಐಆರ್ ಪ್ರಕ್ರಿಯೆ ಮುಗಿದ ಬಳಿಕ ವಿಶೇಷ ಜಾಗೃತಿ ಅಭಿಯಾನ ಕೈಗೊಂಡು ಮತದಾರರ ಪಟ್ಟಿಯಿಂದ ಹೊರಗುಳಿದ ಅರ್ಹರನ್ನು ಸೇರ್ಪಡೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಹೊಸದಾಗಿ ಮತದಾರರ ಪಟ್ಟಿಗೆ ಸೇರುವವರು ನಮೂನೆ 6ರ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಅವರು ತಿಳಿಸಿದರು.

ಸಹಾಯಕ ಗ್ರಂಥಪಾಲಕ ಆರ್.ಎ. ಗುಳಗುಂಡಿ ಅವರಿಗೆ ಬೀಳ್ಕೊಡುಗೆ ಹಾಗೂ ಸನ್ಮಾನ ಸಮಾರಂಭ



ಧಾರವಾಡ : ಸಮಾರಂಭದಲ್ಲಿ ಉಪಸ್ಥಿತರಿದ್ದ ಸಹದ್ಯೋಗಿ ಮಿತ್ರರು ಮತ್ತು ಗಣ್ಯರ ಉಪಸ್ಥಿತಿಯೇ ಆರ್.ಎ. ಗುಲಗುಂಡಿ ಅವರ ಉನ್ನತ ವ್ಯಕ್ತಿತ್ವ, ಜನಪ್ರಿಯತೆ ಹಾಗೂ ಅವರಿಗೆ ಇತರರಲ್ಲಿದ್ದ ಗೌರವ-ಪ್ರೀತಿಗೆ ಸಾಕ್ಷಿಯಾಗಿದೆ ಎಂದು ಅಂಜುಮನ್ ಇಸ್ಲಾಂ ಶಿಕ್ಷಣ ಸ್ಥಂಸ್ಥೆಯ ಅಧ್ಯಕ್ಷ ಜನಾಬ್ ಮೊಹಮ್ಮದ್ ಇಸ್ಮಾಯಿಲ್ ತಮಾಟಗರ್ ಹೇಳಿದರು.

ಇಲ್ಲಿನ ಅಂಜುಮನ್ ಪದವಿ ಮಹಾವಿದ್ಯಾಲಯದ ಗ್ರಂಥಾಲಯದಲ್ಲಿ ಸಹಾಯಕ ಗ್ರಂಥಪಾಲಕರಾಗಿ ಸುದೀರ್ಘ ಸೇವೆ ಸಲ್ಲಿಸಿ ಇಂದು ನಿವೃತ್ತಿ ಹೊಂದುತ್ತಿರುವ ಆರ್.ಎ. ಗುಳಗುಂದಿ ಅವರಿಗೆ ಬೀಳ್ಕೊಡುಗೆ ಹಾಗೂ ಸನ್ಮಾನ ಸಮಾರಂಭದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ನಿವೃತ್ತಸಹಾಯಕಗ್ರಂಥಪಾಲಕ ಆರ್.ಎ.ಗುಳಗುಂಡಿ ಅವರೊಂದಿಗೆತಮಗಿದ್ದ15ವರ್ಷಗಳಒಡನಾಟವನ್ನು ನೆನಪಿಸಿ ತಮ್ಮ ಸಂಪರ್ಕದ ಅವಧಿಯಲ್ಲಿ ಗುಳಗುಂದಿ ಅವರ ವ್ಯಕ್ತಿತ್ವವನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರೊ. ಶಹಬಾಜ್ ಪವಿತ್ರ ಕುರಾನ್ ಪಠಣ ಮಾಡಿದರು. ಡಾ. ಎಸ್.ಕೆ ಜಾಧವ್ ಶ್ಲೋಕ ಪಠಿಸಿದರು. ಪ್ರೊ. ನಾಗರಾಜ ಕನಕನೆ ನಿವೃತ್ತ ಆರ್.ಎ. ಗುಳಗುಂಡಿ ಅವರನ್ನು ಪರಿಚಯಿಸಿದರು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎನ್.ಬಿ. ನಾಲತವಾಡ ಸ್ವಾಗತಿಸಿದರು.

ಡಾ. ಎನ್. ಎಮ್. ಮಕಾಂದಾರ್, ಪ್ರೊ. ಮುಬಾರಕ್ ಮುಲ್ಲಾ, ಡಾ. ಗೌರಿ ಗೌರಿಕೇರಿಮಠ, ಪ್ರೊ. ಉಲ್ಲಾಸ್ ದೊಡಮನಿ, ಅಸಾದುಲ್ಲಾಶಾ ಮಕಾಂದರ್, ಶ್ರೀಮತಿ ರಜಿಯಾ ತಹಶೀಲ್ದಾರ್ ನಿವೃತ್ತ ಆರ್. ಎ. ಗುಳಗುಂಡಿ ಅವರ ಬಗ್ಗೆ ಅಭಿಪ್ರಾಯಗಳನ್ನು ಹಂಚಿಕೊಂಡರು.

ಅಂಜುಮನ್ ಸಂಸ್ಥೆಯ ಉಪಾಧ್ಯಕ್ಷ ಜನಾಬ ಬಶೀರ್ ಅಹ್ಮದ್ ಜಾಗೀರದಾರ್, ಖೈರುದ್ದೀನ್ ಶೇಕ್ ಮತ್ತು ಕಾಲೇಜಿನ ಪ್ರಾಧ್ಯಾಪಕರು, ಉಪನ್ಯಾಸಕರು ಹಾಗೂ ನಿವೃತ್ತ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಡಾ. ಸಯ್ಯದ್ ತಾಜುನೀಸಾ ನಿರೂಪಿಸಿದರು. ಡಾ. ಬೀಬಿ ಆಯೇಷಾ ವಂದಿಸಿದರು.

ರೈತರ ಹೋರಾಟ ದಿಕ್ಕು ತಪ್ಪಬಾರದು

ಹುಬ್ಬಳ್ಳಿ : ರೈತರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ನಡೆಯುವ ಹೋರಾಟಗಳು ತಮ್ಮ ಮೂಲ ಉದ್ದೇಶದಿಂದ ದಿಕ್ಕು ತಪ್ಪಿ ವೈಯಕ್ತಿಕ ಟೀಕೆ, ನಿಂದನೆ ಹಾಗೂ ಕುಟುಂಬ ಸದಸ್ಯರನ್ನು ಗುರಿಯಾಗಿಸುವ ಮಟ್ಟಕ್ಕೆ ಇಳಿಯಬಾರದು ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹೇಳಿದ್ದಾರೆ.



ನಗರದಲ್ಲಿ ನಡೆದ ರೈತರ ಪ್ರತಿಭಟನೆ ಕುರಿತು ಪ್ರತಿಕ್ರಿಯಿಸಿದ ಅವರು, ಸರ್ಕಾರ ಹಾಗೂ ಸಂಬಂಧಪಟ್ಟ ಸಚಿವರನ್ನು ಪ್ರಶ್ನಿಸುವುದು, ರೈತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಒತ್ತಾಯಿಸುವುದು ಪ್ರಜಾಸತ್ತಾತ್ಮಕ ಹಕ್ಕು. ಆದರೆ ಆ ಹಕ್ಕನ್ನು ಸಂವಿಧಾನಬದ್ಧ, ಸೌಜನ್ಯಯುತ ಹಾಗೂ ಶಾಂತಿಯುತ ರೀತಿಯಲ್ಲಿ ಬಳಸುವುದು ಕೂಡ ಅಷ್ಟೇ ಮುಖ್ಯ ಎಂದು ಹೇಳಿದ್ದಾರೆ.

ರೈತರ ಹೋರಾಟ ತನ್ನ ಮೂಲ ಉದ್ದೇಶವನ್ನು ಕಳೆದುಕೊಳ್ಳಬಾರದು. ರೈತರ ಬೆಳೆ, ಬೆಲೆ, ತೂಕ, ಹಣ ಪಾವತಿ ಸೇರಿದಂತೆ ಅವರ ನೈಜ ಸಮಸ್ಯೆಗಳೇ ಹೋರಾಟದ ಕೇಂದ್ರಬಿಂದುವಾಗಬೇಕು. ವೈಯಕ್ತಿಕ ಆರೋಪ-ಪ್ರತ್ಯಾರೋಪಗಳಿಂದ ರೈತರ ಹೋರಾಟದ ಆಶಯಕ್ಕೆ ಧಕ್ಕೆ ಬರಬಾರದು ಎಂದು ಶಂಕರ ಪಾಟೀಲ ಮುನೇನಕೊಪ್ಪ ಹೇಳಿದರು.

ಶೈಕ್ಷಣಿಕ ಪ್ರಗತಿಯಾಗುವಲ್ಲಿ ಸಂಘ-ಸಂಸ್ಥೆಗಳ ಪಾತ್ರ ಹಿರಿದು

ಧಾರವಾಡ : ಸಮಾಜದ ಏಳಿಗೆಯಾಗುವಲ್ಲಿ ಶೈಕ್ಷಣಿಕಸಂಘ-ಸಂಸ್ಥೆಗಳಪಾತ್ರಹಿರಿದಾಗಿದೆ ಎಂದು ಐತಿಹಾಸಿಕ ಕಾದಂಬರಿಕಾರರಾದ ಯ.ರು. ಪಾಟೀಲ ಹೇಳಿದರು.

ನಗರದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ 144ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಸಂಸ್ಥಾಪಕರಾದ ಅರಟಾಳ ರುದ್ರಗೌಡರ ಮತ್ತು ಶ್ರೀಗಿಲಗಂಜಿ ಗುರುಶಿದ್ಧಪ್ಪನವರಸ್ಮರಣೆಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಲಿಂಗಾಯತ ಸಮಾಜ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಕಾಲಘಟ್ಟದಲ್ಲಿ ಅನೇಕ ಲಿಂಗಾಯತ ಮಹನೀಯರು ಒಂದೆಡೆ ಸೇರಿ ಅಪಾರ ಶ್ರಮವಹಿಸಿ, ತ್ಯಾಗಜೀವಿಗಳಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿ ಲಿಂಗಾಯತ ಸಮಾಜದಲ್ಲಿ ಶಿಕ್ಷಣಕ್ರಾಂತಿಗೆ ನಾಂದಿ ಹಾಡಿದರು. ಇಂತಹ ಸಂಘ-ಸಂಸ್ಥೆಗಳಿಂದ ಅನೇಕ ಬಡವಿದ್ಯಾರ್ಥಿಗಳು ಶಿಷ್ಯವೇತನ ಹಾಗೂ ವಸತಿ ಶಿಕ್ಷಣ ಸೌಲಭ್ಯಗಳನ್ನುಪಡೆದು ಹೆಮ್ಮರವಾಗಿ ಬೆಳೆದು ಸಾಧನೆ ಮಾಡಿದ್ದಾರೆ ಎಂದ ಅವರು, ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಗೆ ಆಯಾ ಸಮಾಜದ ಅಭಿವೃದ್ಧಿಗಾಗಿ ಕಟ್ಟಿದ ಸಂಸ್ಥೆಗಳ ಪಾತ್ರ ಹಿರಿದಾಗಿದೆ ಎಂದು ಶ್ಲಾಘಿಸಿದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮನೋರೋಗ ತಜ್ಞರಾದ ಡಾ. ಮಲ್ಲಿಕಾರ್ಜುನಯ್ಯ ಹಿರೇಮಠ ಅವರು ಸಂಸ್ಥೆಯ ಸನ್ಮಾನ ಸ್ವೀಕರಿಸಿ ಮಾತನಾಡಿ, ಇತಿಹಾಸವನ್ನು ಹಾಗೂ ಇತಿಹಾಸ ನಿರ್ಮಿಸಿದ ಮಹಾತ್ಮರ ಸೇವೆ, ಕೊಡುಗೆಗಳನ್ನು ಮುಂದಿನ ಪೀಳಿಗೆಗೆ ತಿಳಿಸುವನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಈ ನಿಟ್ಟಿನಲ್ಲಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಕಾರ್ಯ ಪ್ರಶಂಸನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀವಿ.ಬಿ. ಯಳಲ್ಲಿ ಅವರು, ಲಿಂಗಾಯತ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಗಣ್ಯಮಾನ್ಯರನ್ನು ಈ ಸಂದಭದಲ್ಲಿ ಸ್ಮರಿಸುವುದುನಮ್ಮ ಆದ್ಯ ಕರ್ತವ್ಯ ಎಂದರು. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಆರ್.ಯು.ಬೆಳ್ಳಕ್ಕಿ ಮಾತನಾಡಿ, ಮುಂಬರುವ ದಿನಗಳಲ್ಲಿ ಹೊಸ ಹೊಸ ಶೈಕ್ಷಣಿಕ ಶಾಖೆಗಳನ್ನು ತೆರೆಯುವುದಾಗಿ ತಿಳಿಸಿದರು.

ಪ್ರಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ಗೌರವ ಕಾರ್ಯದರ್ಶಿ ಸಿ.ಬಿ. ಮಟ್ಟಿ, ಶೂನ್ಯದಿಂದ ಸಂಸ್ಥೆ ಬೆಳೆದುಬಂದ ದಾರಿಯನ್ನು ಮೆಲುಕು ಹಾಕಿದರು. ಸ್ವಾಗತ ಮತ್ತು ಪರಿಚಯವನ್ನು ಸಂಸ್ಥೆಯ ಅಧೀಕ್ಷಕರಾದ ಎಸ್.ಸಿ. ನೀಲಗುಂದ ನಡೆಸಿಕೊಟ್ಟರು. ಎ.ಎಸ್.ತಳ್ಳಿ ವಂದಿಸಿದರು. ಕಾನೂನು ವಿದ್ಯಾರ್ಥಿಯಲ್ಲಾಲಿಂಗ ಕಾರ್ಯಕ್ರಮ ನಿರೂಪಿಸಿದರು. ಅವ್ವಪ್ಪಣ್ಣ ಅತ್ತಿಗೇರಿ ಕೈಗಾರಿಕಾ ತರಬೇತಿ ಸಂಸ್ಥೆಯ ವಿದ್ಯಾರ್ಥಿನೀಯರು ಪ್ರಾರ್ಥನೆ ಮತ್ತು ಸ್ವಾಗತಗೀತೆ ಪ್ರಸ್ತುತಪಡಿಸಿದರು.

ಸಮಾರಂಭದಲ್ಲಿ ಆಡಳಿತ ಮಂಡಳಿ ಜಂಟಿ ಕಾರ್ಯದರ್ಶಿಗಳಾದ ಎಸ್.ಎಂಅಗಡಿ, ಸದಸ್ಯರಾದ ಬಿ.ಎಸ್. ತಾಳಿಕೋಟಿ ಮತ್ತು ಎಂ.ಆರ್. ಇಂಡಿ, ಮಾಜಿ ಗೌರವಕಾರ್ಯದರ್ಶಿಗಳಾದ ಸಿ.ಬಿಕನವಳ್ಳಿ, ಸಂಸ್ಥೆಯ ಆಜೀವ ಸದಸ್ಯರಾದ ಬಿ.ಕೆ. ಸಾದರ, ಡಾ.ಶಿ. ಗುಹಿ ರೇಮಠ, ಪಾರ್ವತಿ ಸುರೇಶ ಹಾಲಭಾವಿ, ಪ್ರಾಚಾರ್ಯರಾದ ಎಸ್.ಎಂ.ಬಮ್ಮನಗೌಡರ, ಶ್ರೀಮತಿ.ಸವಿತಾ ಪಾಟೀಲ, ಶ್ರೀಮತಿ. ಭುವನೇಶ್ವರಿ ದಂಡಿನ, ಅಡಿವೆಪ್ಪ ಕೋಳಿಮತ್ತು ಡಿ.ಬಿ.ಹೊಂಬಳ, ವೀರೇಶ ಜಾಲಿಕಟ್ಟಿ, ರಾಘವೇಂದ್ರ ಗುಡೆಣ್ಣವರ, ಪ್ರಕಾಶ ಕಟಗಿ, ಮೃತ್ಯುಂಜಯ ಅಮರಗೋಳ, ಸೋಮಶೇಖರ ಕರಡಿಗುಡ್ಡ, ಬಿ.ಎಸ್. ಸವಡಿ, ಎಸ್.ಬಿ. ಮಗದುಮ್ಮ, ಉಳವಪ್ಪ ಎತ್ತಿನಗುಡ್ಡ, ರಾಜು ಪಲ್ಲೇದ, ನಾಗರಾಜ ಗೊಂದಿ, ಕಿರಣ ಬಣಕಾರ, ಮಾಹಾಂತೇಶ ಮುಲ್ಕಿಪಾಟೀಲ, ಪ್ರವೀಣ ಬಡಿಗೇರ, ನಿಂಗವ್ವಹೆಬ್ಬಳ್ಳಿ, ನಂದಿನಿ ಗಡಾದ, ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಹಾಗೂ ಅಪಾರ ಸಂಖ್ಯೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪೂರ್ಣಪ್ರಮಾಣದ ಪರಿಹಾರ ನೀಡಲು ಆಗ್ರಹ

ನವಲಗುಂದ : ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಿಂದ ಹಾನಿಗೊಳಗಾದ ರೈತರಿಗೆ ಸರಕಾರ ಇನ್‌ಪುಟ್ 2500 ರೂಗಳ ಸಬ್ಸಿಡಿ ನೀಡಿರುವುದನ್ನು ಖಂಡಿಸಿ ಮಹಾದಾಯಿ,ಕಳಸಾ ಬಂಡೂರಿ ರೈತ ಹೋರಾಟ ಸಮಿತಿಯಿಂದ ರೈತರು ಪ್ರತಿಭಟನೆ ನಡೆಸಿ 2600 ರೂಗಳ ಡಿಡಿಯನ್ನು ಮುಖ್ಯಮಂತ್ರಿಗಳಿಗೆ ನೀಡುವ ಮೂಲಕ ಆಕ್ರೋಶ ವ್ಯಕ್ತ ಪಡಿಸಿದರು.

ಅಣಥಿ& ಐಥಿಛಿಟ ಉಹಜಿಜಥ

ರೈತ ಮುಖಂಡ ಲೋಕನಾಥ ಹೆಬಸೂರ ಮಾತನಾಡಿ ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆಯಾಗದೆ ರೈತ ಸಮುದಾಯ ಭೀಕರ ಬರಗಾಲ ಎದುರಿಸುತ್ತಿದ್ದರೂ ಸರಕಾರ ಇನ್‌ಪುಟ್ ಸಬ್ಸಿಡಿ ನೆಪದಲ್ಲಿ ಕೇವಲ 2500 ನೂರು ರೂಗಳನ್ನು ರೈತರಿಗೆ ನೀಡುವುದಾಗಿ ಹೇಳುವ ಮೂಲಕ ನೊಂದ ರೈತರನ್ನು ಅವಮಾನಿಸಿದ್ದು, ಸರಕಾರ ಕೂಡಲೇ ಇನ್‌ಪುಟ್ ಸಬ್ಸಿಡಿಯನ್ನು ಮರುಪರಿಲಿಸಿ ವ್ಯಂತರ ಪರಿಹಾರವಾಗಿ



ತಲಾ ರೈತರಿಗೆ 25000ಸಾವಿರ ರೂಗಳನ್ನು ನೀಡಬೇಕೆಂದು ಆಗ್ರಹಿಸಿದರಲ್ಲದೇ ಸರಕಾರದಲ್ಲಿ ರೈತರಿಗೆ ಪರಿಹಾರ ನೀಡಲು ಹಣ ವಿಲ್ಲದಿದ್ದರೆ ಸ್ವತ: ರೈತರೇ ಭಿಕ್ಷೆ ಬೇಡಿಯಾದರೂ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಹಣ ಜಮಾ ಮಾಡುತ್ತವೆ ಎಂದರಲ್ಲದೇ ಆ7ರೊಳಗಾಗಿ ಪೂರ್ಣ ಪ್ರಮಾಣದಲ್ಲಿ ರೈತರಿಗೆ ಪರಿಹಾರ ನೀಡಲು ಕ್ರಮ ಜರುಗಿಸದಿದ್ದರೆ ನವಲಗುಂದ ಬಂದ್ ಮಾಡುವ ಮೂಲಕ ಶಾಲಾ ಕಾಲೇಜು ವಿದ್ಯಾರ್ಥಿಗಳನ್ನೊಳಗೊಂಡ ಜೆನ್ ಜೀ ಮಾದರಿ ಹೋರಾಟ ಮಾಡುವುದಾಗಿ ಎಚ್ಚರಿಸಿದ ಅವರು ಈ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಅವಘಡಗಳು ನಡೆದಲ್ಲಿ ಸರಕಾರವೇ ಹೊಣೆಗಾರವಾಗಲಿದೆ ಎಂದೂ ಹೆಬಸೂರ ಎಚ್ಚರಿಸಿದರು.

ರಘುನಾಥ ನಡುವಿನಮನಿ ಮಾತನಾಡಿ ಬಿಡದಿ ರೈತರ ಜಮೀನು ಕಬಳಿಸುವ ಕುರಿತು ಚರ್ಚೆ ಮಾಡುತ್ತೀರಿ ಕಷ್ಟದಲ್ಲಿರುವ ರೈತರ ಕುರಿತು ಚಿಂತನೆಮಾಡುತ್ತಿಲ್ಲ. ರೈತರ ಕಷ್ಟದಲ್ಲಿರುವ ಕುರಿತು ಚಿಂತನೆ ಮಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕಾಗಮಿಸಿದ ತಹಶೀಲ್ದಾರ ಸುಧೀರ ಸಾಹುಕಾರಅವರು ರೈತರ ಮನವಿಯನ್ನು ಸ್ವೀಕರಿಸಿದರು.

ಮಹಬೂಬಸಾಬ ನವಲಗುಂದ, ಮಹಾದೇವಿ ಹುಯಿಲಗೋಳ, ದೇವಪ್ಪ ಗುಡಿಸಾಗರ, ಗೌಡಪ್ಪಗೌಡ ದೊಡಮನಿ, ಮೈಲಾರಪ್ಪ ವೈದ್ಯ, ಭರಮಪ್ಪ ಕಾತರಕಿ, ಮಲ್ಲಿಕಾರ್ಜುನಗೌಡ ಪಾಟೀಲ, ಕಿರಣಕುಮಾರಕಟ್ಟಿ, ಈರಣ್ಣಕೇಸರಪ್ಪನವರ, ಶಿವಾನಂದ ಚಿಕ್ಕನರಗುಂದ, ಶಂಕರಗೌಡ ಮಳ್ಳಪ್ಪಗೌಡರ, ವೀರನಗೌಡ ಮುದಿಗೌಡರ ಸೇರಿದಂತೆ ನೂರಾರು ರೈತರು ಪ್ರತಿಭಟನೆಲ್ಲಿ ಪಾಲ್ಗೊಂಡಿದ್ದರು.

ವಿಜಯಪುರ ನಗರ ಮತಕ್ಷೇತ್ರದಲ್ಲಿ 80 ಸಾವಿರಕ್ಕೂ ಹೆಚ್ಚು ಮತದಾರರ ಹೆಸರು ಡಿಲೀಟ್

ವಿಜಯಪುರ: ವಿಜಯಪುರ ನಗರ ಮತಕ್ಷೇತ್ರ ವ್ಯಾಪ್ತಿಯಲ್ಲಿ 80 ಸಾವಿರಕ್ಕೂ ಹೆಚ್ಚು ಮತದಾರರ ಹೆಸರುಗಳು ಡಿಲೀಟ್ ಆಗಿವೆ. ಅದರಲ್ಲಿ ಶೇ.90 ರಷ್ಟು ಮತದಾರರು ಹೊರಗಿನ ಮತದಾರರೇ ಇದ್ದರು. ಈ ಹೊರಗಿನಮತದಾರರಮೂಲಕವೇಚುನಾವಣೆಯಲ್ಲಿ ಆಯ್ಕೆಯಾಗುವ ಬಿಜೆಪಿ ಉಚ್ಚಾಟಿತ ಶಾಸಕ ಯತ್ನಾಳ ಹೊರಗಿನ ಮತದಾರರು ಮತಪಟ್ಟಿಯಿಂದ ಡಿಲಿಟ್ ಆಗಿರುವುದರಿಂದ ಕಳವಳಗೊಂಡಿದ್ದಾರೆ ಎಂದು ಅಲ್ಪಸಂಖ್ಯಾತ ಮುಖಂಡ ಇರ್ಫಾನ್ ಶೇಖ್ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಗಲಭೆ ಸೃಷ್ಟಿಸುವುದು ಪಾಕಿಸ್ತಾನದ ಷಡ್ಯಂತ್ರ. ಈ ರೀತಿ ಪಾಕಿಸ್ತಾನ ಬಯಸುವುದನ್ನೇಮಾಡುವಶಾಸಕಯತ್ನಾಳಅವರೇ ಪಾಕಿಸ್ತಾನ ಏಜೆಂಟ್. ಮುಖ್ಯ ಚುನಾವಣಾ ಆಯುಕ್ತ ಪ್ರಜಾಪ್ರಭುತ್ವ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ. ಹೀಗಾಗಿ ಆತನ ಪ್ರತಿಕೃತಿ ದಹಿಸಲಾಗಿದೆ. ಚುನಾವಣಾ ಆಯೋಗವನ್ನು ಬುಡಮೇಲು ಮಾಡಿದ ವ್ಯಕ್ತಿಯ ಪ್ರತಿಕೃತಿ ದಹಿಸುವುದನ್ನು ಬಿಟ್ಟು ಪೂಜೆ ಮಾಡಬೇಕೆ ಎಂದು ಪ್ರಶ್ನಿಸಿದರು.

ಮತಪಟ್ಟಿಗೆ ಸಂಬಂಧಿಸಿದಂತೆ ಹಳೆಯ ದಾಖಲೆ, ಹಳೆಯ ಮತಪಟ್ಟಿಯನ್ನೇ ಪ್ರದರ್ಶಿಸಿ ಜನರ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡುತ್ತಿದ್ದಾರೆ. ಹಳೆಯ ಚಿತ್ರ ಇರುವ ಬಗ್ಗೆ ಅವರಲ್ಲ ನಾವೇ ಆಕ್ಷೇಪಣೆ ಸಲ್ಲಿಸಿದ್ದೇವೆ. ಹೊಸ ಮತದಾರರ ಪಟ್ಟಿಯಲ್ಲಿ ಹೊಸ ಫೋಟೊ ಬರುತ್ತದೆ ಎಂಬ ಸಾಮಾನ್ಯ ಪರಿಜ್ಞಾನವೂ ವಿಜಯಪುರ ನಗರ ಶಾಸಕರಿಗೆ ಇಲ್ಲ ಎಂದರು.

ಆದಾಖಲೆಬಿಡುಗಡೆಮಾಡುವೆ,ಈದಾಖಲೆಬಿಡುಗಡೆ ಮಾಡುವೆ ಎಂದು ಹಿಟ್ ಆಂಡ್ ರನ್ ಮಾಡುವುದು ಯತ್ನಾಳ ಚಾಳಿ. ಸಚಿವ ಎಂ.ಬಿ. ಪಾಟೀಲರು ಟೆನ್ಸನ್ ತೆಗೆದುಕೊಳ್ಳುತ್ತಾರೆ ಎಂದಿದ್ದಾರೆ. ಹೌದು ಎಂ ಬಿ ಪಾಟೀಲರು ಟೆನ್ಸನ್ ತೆಗೆದುಕೊಳ್ಳುತ್ತಾರೆ. ಅದರ



ಆ ದಾಖಲೆ ಬಿಡುಗಡೆ ಮಾಡುವೆ, ಈ ದಾಖಲೆ ಬಿಡುಗಡೆ ಮಾಡುವೆ ಎಂದು ಹಿಟ್ ಆಂಡ್ ರನ್ ಮಾಡುವುದು ಯತ್ನಾಳ ಚಾಳಿ

ಇರ್ಫಾನ್ ಶೇಖ್, ಅಲ್ಪಸಂಖ್ಯಾತ ಮುಖಂಡ

ಪರಿಣಾಮವಾಗಿಯೇ ಜಿಲ್ಲೆ ನೀರಾವರಿಯಾಗಿದೆ. ನಿಮ್ಮಂತೆ ಅವರು ಜಗಳ ಹಚ್ಚುವ ಕೆಲಸ ಮಾಡಿಲ್ಲ. ಹೀಗಾಗಿ ಅವರ ಬಗ್ಗೆ ಮಾತನಾಡುವ ಯಾವ ನೈತಿಕತೆಯೂ ಸಹ ನಗರ ಶಾಸಕರಿಗೆ ಇಲ್ಲ ಎಂದರು. ನನ್ನದು ಗೂಂಡಾಗಿರಿ ಎಂದು ಹೇಳುವ ಮೊದಲು ಅವರ ಮೇಲೆ ಎಷ್ಟು ಪ್ರಕರಣಗಳಿವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಲಿ. ಕೋಮು ಗಲಭೆ, ದೊಂಬಿ ಸೃಷ್ಟಿಯಂತಹ ಗಂಭೀರ ಪ್ರಕರಣಗಳು ಅವರ ಮೇಲಿದೆ. ಹೀಗಾಗಿ ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಮಾಜಿ ಉಪಮೇಯರ್ ದಿನೇಶ ಹಳ್ಳಿ, ಪಾಲಿಕೆ ಸದಸ್ಯ ಅಶ್ಫಾಕ್ ಮನಗೂಳಿ, ಪಾಲಿಕೆ ಮಾಜಿ ಸದಸ್ಯ ಮೈನುದ್ದೀನ್ ಬೀಳಗಿ, ಗಂಗೂಬಾಯಿ ಧುಮಾಳೆ ಉಪಸ್ಥಿತರಿದ್ದರು.

ತಾಳಿಕೋಟೆಯಲ್ಲಿ ಜೋಳಿಗೆ ಹಿಡಿದು ಹಣ ಸಂಗ್ರಹ

ತಾಳಿಕೋಟೆ: ಆರ್ಥಿಕ ದುರ್ಗತಿ ಯಾವುದೇ ಸರ್ಕಾರಕ್ಕೂ ಬರಬಾರದು." ಹೀಗೆ–ಎಂದು ಆಕ್ರೋಶ ವ್ಯಕ್ತಪಡಿಸುತ್ತಾ ಅಖಂಡ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ತಾಳಿಕೋಟೆ ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠದಿಂದ ಪ್ರಮುಖ ರಸ್ತೆಗಳಲ್ಲಿ ರಾಜ್ಯ ಸರ್ಕಾರಕ್ಕೆ ನೆರವು ನೀಡಲು ರೈತ ಸಂಘದ ಅರವಿಂದ ಕುಲಕರ್ಣಿ ಅವರ ನೇತೃತ್ವದಲ್ಲಿ ಜೋಳಿಗೆ ಹಿಡಿದು ದೇಣಿಗೆ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ರಾಜ್ಯದಲ್ಲಿ ಭೀಕರ ಬರಗಾಲ ಆವರಿಸಿದ್ದು, ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರವು ಇನ್‌ಪುಟ್ ಸಬ್ಸಿಡಿ ರೂಪದಲ್ಲಿ ಕೇವಲ 2500 ರವರೆಗೆ ಪರಿಹಾರ ನೀಡಲು ಮುಂದಾಗಿರುವುದು ರೈತರನ್ನು ಭಿಕ್ಷುಕರಂತೆ ನೋಡಿ–ದಂತಾಗಿದೆ. ಆರ್ಥಿಕವಾಗಿ ಸಂಪೂರ್ಣ ದಿವಾಳಿಯಾಗಿರುವ ರಾಜ್ಯ ಸರ್ಕಾರಕ್ಕೆ ವ್ಯಾಪಾರಸ್ಥರು ಹಾಗೂ ತರಕಾರಿ ಮಾರಾಟ ಮಾಡುವ ರೈತರಿಂದ ದೇಣಿಗೆ ಸಂಗ್ರಹಿಸಿ, ಡಿಡಿ (ಚೆಕ್) ಮುಖಾಂತರ ಜಿಲ್ಲಾಧಿಕಾರಿಗಳಿಗೆ ರವಾನಿಸಲಾಗುವುದು ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ



ಕುಲಕರ್ಣಿ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ವಿಠ್ಠಲ ಬಿರಾದಾರ ತಿಳಿಸಿದರು.

ಪಟ್ಟಣದ ಮುಖ್ಯ ರಸ್ತೆಯ ಅಂಗಡಿ ಮಾಲೀಕರು, ರೈತ ಮಹಿಳೆಯರು ಹಾಗೂ ಶಾಲಾ ವಿದ್ಯಾರ್ಥಿನಿಯರು ಈ ಅಭಿಯಾನದಲ್ಲಿ ತಮ್ಮ ಶಕ್ಯಾನುಸಾರ ಹಣ ನೀಡಿದರು. ಒಟ್ಟು 3,485 ದೇಣಿಗೆ ಸಂಗ್ರಹವಾಯಿತು.

ಸಂಗ್ರಹವಾದ ಹಣವನ್ನು ತಹಶೀಲ್ದಾರರಿಗೆ ಹಸ್ತಾಂತರಿಸಲು ಹೋದಾಗ ಅವರು ಸ್ವೀಕರಿಸಲು ನಿರಾಕರಿಸಿದ್ದರಿಂದ,ಗುರುವಾರ ಡಿಡಿ ಮುಖಾಂತರ ಜಿಲ್ಲಾಧಿಕಾರಿಗಳಿಗೆ ತಲುಪಿಸಲಾಗುವುದು ಎಂದು ಅರವಿಂದ ಕುಲಕರ್ಣಿ ಅವರು ತಿಳಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ವಾಗ್ದಾಳಿ:

ತಾಲೂಕು ಅಧ್ಯಕ್ಷ ಬಾಲಪ್ಪಗೌಡ ಲಿಂಗದಳ್ಳಿ ಹಾಗೂ ಉಪಾಧ್ಯಕ್ಷ ರಾಮನಗೌಡ ಹಾದಿಮನಿ ಮಾತನಾಡಿ, "ಜನಸಾಮಾನ್ಯರಿಂದ ಕೋಟ್ಯಾಂತರ ರೂಪಾಯಿ ತೆರಿಗೆ ಸಂಗ್ರಹವಾಗುತ್ತಿದ್ದರೂ ಹಣ ಎಲ್ಲಿಗೆ ಹೋಯಿತು ಆಡಳಿತಾರೂಢ ಸರ್ಕಾರಗಳು ಅನಗತ್ಯ ಯೋಜನೆಗಳನ್ನು ಜಾರಿಗೆ ತಂದು ರಾಜ್ಯವನ್ನು ಆರ್ಥಿಕವಾಗಿ ಹಾಳುಮಾಡುತ್ತಿವೆ.

ರೈತರ ಹಿತ ಕಾಯುವುದನ್ನು ಬಿಟ್ಟು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಸ್ಪರ ಬೊಟ್ಟು ಮಾಡಿ ತೋರಿಸುತ್ತಾ ರೈತರನ್ನು ಸಂಕಷ್ಟಕ್ಕೆ ತಳ್ಳುತ್ತಿವೆ" ಎಂದು ಕಿಡಿಕಾರಿದರು.

ಅಲ್ಲದೇ "ಕೇಂದ್ರ ಸರ್ಕಾರವು ದೊಡ್ಡ ಉದ್ಯಮಿಗಳ ಸಾಲ ಮನ್ನಾ ಮಾಡುವ ಬದಲು, ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾಡಿರುವ ಕೃಷಿ ಸಾಲವನ್ನು ತಕ್ಷಣವೇ ಸಂಪೂರ್ಣ ಮನ್ನಾ ಮಾಡಬೇಕು. ಸರ್ಕಾರಗಳು ರೈತರ ವಿಷಯದಲ್ಲಿ ಗೌರವದಿಂದ ನಡೆದುಕೊಳ್ಳದಿದ್ದರೆ ಮುಂಬರುವ ಚುನಾವಣೆಯಲ್ಲಿ ಸೂಕ್ತ ಪಾಠ ಕಲಿಸಬೇಕಾಗುತ್ತದೆ" ಎಂದು ಎಚ್ಚರಿಸಿದರು.

ಈ ಪ್ರತಿಭಟನಾ ಬಿಕ್ಷಾಟನಾ ಅಭಿಯಾನದಲ್ಲಿ ಸಂಘಟನೆಯ ಪ್ರಮುಖರಾದ ವಿಠ್ಠಲ ಬಿರಾದಾರ, ತಾಲೂಕಾ ಅಧ್ಯಕ್ಷ ಬಾಲಪ್ಪಗೌಡ ಲಿಂಗದಳ್ಳಿ, ರಾಮನಗೌಡ ಹಾದಿಮನಿ, ಬಸವರಾಜ ಹೊಸಳ್ಳಿ, ಸಂತೋಷ ಬಿರಾದಾರ, ಹಣಮಂತರಾಯ ಹಂದ್ರಾಳ, ಸಿದ್ಧಲಿಂಗಪ್ಪ ಬಿರಾದಾರ, ಸಂಗನಗೌಡ ಬಿರಾದಾರ, ಮಲ್ಲಿಕಾರ್ಜುನ ಬಿರಾದಾರ, ಪ್ರಭುಗೌಡ ಬಿರಾದಾರ, ಸುಭಾಷ ಗುದಗಿ, ಹನುಮಂತರಾಯ ಸಾಸನೂರ, ಸಂಗನಗೌಡ ಕೊಳೂರು, ಬಸನಗೌಡ ಕವದಿ ಸೇರಿದಂತೆ ಹಲವು ರೈತರು ಭಾಗವಹಿಸಿದ್ದರು.

ನಿಡಗುಂದಿ: ಕೆಬಿಎಚ್‌ಪಿಎಸ್ ಶಾಲೆಯ ಬಾಲಕಿಯರ ಕಬ್ಬಡಿ ತಂಡ ಜಿಲ್ಲಾಮಟ್ಟಕ್ಕೆ ಆಯ್ಕೆ

ನಿಡಗುಂದಿ: ಬಸವನಬಾಗೇವಾಡಿ ತಾಲ್ಲೂಕು ಮಟ್ಟದ ಅಂಡರ್–14 ಹಾಗೂ ಅಂಡರ್–17 ವಯೋಮಿತಿ ಕಬ್ಬಡಿ ಪಂದ್ಯಾವಳಿಯಲ್ಲಿ ತಾಲ್ಲೂಕಿನ ಆರೇಶಂಕರ ಕೆಬಿಎಚ್‌ಪಿಎಸ್ ಶಾಲೆಯ ಬಾಲಕಿಯರ ತಂಡ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದೆ.

ತಳೇವಾಡ ಗ್ರಾಮದ ಪಿಎಂ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ನಡೆದ ತಾಲ್ಲೂಕು ಮಟ್ಟದ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸಿದೆ. ಶಾಲೆಗೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿರುವುದು ಸಂತಸ ತಂದಿದೆ ಎಂದು ಶಾಲೆಯ ಮುಖ್ಯಶಿಕ್ಷಕ ಬಿ.ಆರ್. ಪಾಟೀಲ ಹೇಳಿದರು. ತಂಡದ ಸಾಧನೆಗೆ ಶಾಲೆಯ



ಶಿಕ್ಷಕರು, ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದರು. ಎಂ.ಬಿ. ಹಾಲ್ಯಾಳ, ಆರ್.ಎಸ್. ಅಂಗಡಿ, ಬಿ.ಎಂ. ಶಿಂದೆ, ಬಿ.ಎ. ಮಂಕಣಿ, ಎಂ.ಬಿ. ಪತ್ತಾರ, ಅತಿಥಿ ಶಿಕ್ಷಕ ಸುರೇಶ ಮೊಕಾಶಿ ಉಪಸ್ಥಿತರಿದ್ದರು.

ಜನಗಣತಿಯಲ್ಲಿ 21 ಅಂಗವೈಕಲ್ಯಗಳ ಪ್ರತ್ಯೇಕ ದಾಖಲೀಕರಣಕ್ಕೆ ಆಗ್ರಹ

ವಿಜಯಪುರ:ಅಂಗವಿಕಲರ ಹಕ್ಕುಗಳ ಕಾಯ್ದೆ–2016ರಡಿ ಮಾನ್ಯತೆ ಪಡೆದಿರುವ ಎಲ್ಲ 21 ವಿಧದ ಅಂಗವೈಕಲ್ಯಗಳನ್ನು 2027ರ ಜನಗಣತಿಯಲ್ಲಿ ಪ್ರತ್ಯೇಕವಾಗಿ ದಾಖಲಿಸಬೇಕು ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ವಿಜಯಪುರ ಜಿಲ್ಲಾ ಸಮಿತಿ ಆಗ್ರಹಿಸಿದೆ. ಒಕ್ಕೂಟದ ಅಧ್ಯಕ್ಷವಿನೋದಎಂ.ಖೇಡಅವರ ನೇತೃತ್ವದಲ್ಲಿಬುಧವಾರಪ್ರತಿಭಟನೆ ನಡೆಸಿದ ಪದಾಧಿಕಾರಿಗಳು, ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

ಪ್ರಸ್ತಾವಿತ ಜನಗಣತಿಯಲ್ಲಿ ಕೇವಲ ಒಂಬತ್ತು ವಿಧದ ಅಂಗವೈಕಲ್ಯಗಳನ್ನು ಪ್ರತ್ಯೇಕವಾಗಿ ದಾಖಲಿಸುವ ಕ್ರಮದಿಂದ ಉಳಿದ ಅಂಗವೈಕಲ್ಯಗಳ ನಿಖರ ಅಂಕಿ–ಅಂಶ ಲಭ್ಯವಾಗದ ಪರಿಸ್ಥಿತಿ ನಿರ್ಮಾಣವಾಗಬಹುದು.



ಹೀಗಾಗಿ ಕಾಯ್ದೆಯಲ್ಲಿ ಮಾನ್ಯತೆ ಪಡೆದಿರುವ ಎಲ್ಲ 21 ವರ್ಗಗಳನ್ನೂ ಜನಗಣತಿಯಲ್ಲಿ ಪ್ರತ್ಯೇಕವಾಗಿ ದಾಖಲಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್, ನಿರ್ದಿಷ್ಟ ಕಲಿಕಾ ಅಸಮರ್ಥತೆ, ಕುಬ್ಜತೆ, ಕುಷ್ಠರೋಗದಿಂದ ಗುಣಮುಖರಾದವರು, ಬಹು ಅಂಗವೈಕಲ್ಯ ಹಾಗೂ ಕಿವುಡು–ಕುರುಡುತನ ಸೇರಿದಂತೆ ವಿವಿಧ ಅಂಗವೈಕಲ್ಯಗಳ ಪ್ರತ್ಯೇಕ ದಾಖಲೀಕರಣ ಅಗತ್ಯವಾಗಿದೆ ಎಂದು ವಿನೋದ ಖೇಡ ಹೇಳಿದರು.

ಜನಗಣತಿಯ ಅಂಕಿ–ಅಂಶಗಳು ಸರ್ಕಾರದ ಯೋಜನೆ, ಬಜೆಟ್ ಹಂಚಿಕೆ ಹಾಗೂ ಶಿಕ್ಷಣ, ಉದ್ಯೋಗ, ಆರೋಗ್ಯ, ಪುನರ್ವಸತಿ, ಸಾಮಾಜಿಕ ಭದ್ರತೆ ಮತ್ತು ಪ್ರವೇಶಯೋಗ್ಯತೆ ಸೇರಿದಂತೆ ಹಲವು ಕ್ಷೇತ್ರಗಳ ನೀತಿ ರೂಪಣೆಗೆ ಆಧಾರವಾಗುತ್ತವೆ. ಅಂಗವಿಕಲರನಿಖರಸಂಖ್ಯೆಮತ್ತು ಅವರಅಂಗವೈಕಲ್ಯದಸ್ವರೂಪವೇ ದಾಖಲಾಗದಿದ್ದರೆ, ಅಗತ್ಯಕ್ಕೆ ತಕ್ಕ ಯೋಜನೆ ಹಾಗೂ ಸೌಲಭ್ಯ ರೂಪಿಸುವುದು ಕಷ್ಟವಾಗಲಿದೆ ಎಂದು ಅವರು ಹೇಳಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಶೋಕ ವಾಲಿಕಾರ ಮಾತನಾಡಿ, ಅಂಗವಿಕಲರ ಹಕ್ಕುಗಳ ಕಾಯ್ದೆ–2016ರಲ್ಲಿ ಗುರುತಿಸಿರುವ 21 ನಿರ್ದಿಷ್ಟ ಅಂಗವೈಕಲ್ಯಗಳನ್ನೂ ಜನಗಣತಿಯಲ್ಲಿ ಪ್ರತ್ಯೇಕವಾಗಿ ದಾಖಲಿಸುವ ಮೂಲಕ ಕಾನೂನು ಮಾನ್ಯತೆ ಹಾಗೂ ಜನಗಣತಿಯ ವರ್ಗೀಕರಣದಲ್ಲಿ ಏಕರೂಪತೆ ಕಾಯ್ದುಕೊಳ್ಳಬೇಕು ಎಂದು ಒತ್ತಾಯಿಸಿದರು.ಜಿಲ್ಲಾಉಪಾಧ್ಯಕ್ಷ ಎಂ.ಬಿ. ಉಮರಾಣಿ, ತಾಲೂಕು ಅಧ್ಯಕ್ಷ ಅಂಬಣ್ಣ ಗುನ್ನಾಪುರ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಹಾಗೂ ಅಂಗವಿಕಲರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಸವನಬಾಗೇವಾಡಿ ಚರಂಡಿ ದುರಸ್ತಿ ಮಾಡಲು ಟಿಪ್ಪು ಭೀಮ್ ಆರ್ಮಿ ಆಗ್ರಹ



ಬಸವನಬಾಗೇವಾಡಿ: ಪಟ್ಟಣದ ಇಂಗಳೇಶ್ವರ ರಸ್ತೆಯಲ್ಲಿರುವ ಅಲ್ಪಸಂಖ್ಯಾತರ ಖಬರಸ್ತಾನ ಮುಖ್ಯ ದ್ವಾರದ ಬಳಿ ಹಾಳಾಗಿರುವ ಚರಂಡಿಯನ್ನು ತಕ್ಷಣ ದುರಸ್ತಿ ಮಾಡಿ, ಸಾರ್ವಜನಿಕರ ಸುರಕ್ಷಿತ ಸಂಚಾರ–ಕ್ಕೆ ಅನುಕೂಲ ಕಲ್ಪಿಸಬೇಕು ಎಂದು ಆಗ್ರಹಿಸಿ ಟಿಪ್ಪು ಭೀಮ್ ಆರ್ಮಿ ಸಂಘಟನೆ ಮುಖಂಡರು ಗುರುವಾರ ಪುರಸಭೆ ಕಚೇರಿಯ ವ್ಯವಸ್ಥಾಪಕ ಸುರೇಶ ಬಾಗೇವಾಡಿ ಅವರಿಗೆ ಮನವಿ ಸಲ್ಲಿಸಿದರು.

ಖಬರಸ್ತಾನದ ಮುಖ್ಯ ದ್ವಾರದ ಬಳಿ ಇರುವ ಚರಂಡಿ ಒಡೆದು ಹಾಳಾಗಿರುವುದರಿಂದ ಅಂತ್ಯಕ್ರಿಯೆ ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ಖಬರಸ್ತಾನಕ್ಕೆ ಬರುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಚರಂಡಿಯಲ್ಲಿ ಈಗಾಗಲೇ ಕೆಲವರು ಬಿದ್ದು ಸಣ್ಣಪುಟ್ಟ ಗಾಯಗಳಿಗೆ ಒಳಗಾಗಿದ್ದಾರೆ. ಮುಂದೆ ಯಾವುದೇ ಅನಾಹುತ ಸಂಭವಿಸದಂತೆ ಚರಂಡಿಯನ್ನು ಕೂಡಲೇ ದುರಸ್ತಿ ಮಾಡಬೇಕು. ಜೊತೆಗೆ ಖಬರಸ್ತಾನದ ಒಳಗೆ ಸಾರ್ವಜನಿಕರು ಸುಗಮವಾಗಿ ಹೋಗಿ ಬರಲು ಚರಂಡಿ ಮೇಲೆ ಸಣ್ಣ ಸೇತುವೆ ಅಥವಾ ಸೂಕ್ತ ವ್ಯವಸ್ಥೆ ನಿರ್ಮಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದರು.

ಇದೇ ವೇಳೆ ಟಿಪ್ಪು ಭೀಮ್ ಆರ್ಮಿ ಸಂಸ್ಥಾಪಕ ಅಧ್ಯಕ್ಷ ಖಾಜಂಬರ ನದಾಫ, ಆಬಿದ್ ನಾ ತಾಂಬೋಳಿ, ಹೈದರ್ ಮಕಾನದಾರ, ಮೈಬುಬ ಬಾಗವಾನ, ಆಶೀಫ್ ಪಟೇಲ್, ಅಬುಶಾಮ್ ಖೇಡಗಿ ಭಾಗವಹಿಸಿದ್ದರು.

ರೈತ ಪ್ರಭುಗೌಡ ಗೌಡರಡ್ಡಿಗೆ ಧಾರವಾಡ ಕೃಷಿ ವಿವಿಯಿಂದ ಸಾಧಕ ರೈತ ಪ್ರಶಸ್ತಿ

ತಾಳಿಕೋಟೆ: ತಾಲೂಕಿನ ಬಿ. ಸಾಲವಾಡಗಿ ಗ್ರಾಮದ ಪ್ರಗತಿಪರ ರೈತ ಹಾಗೂ ಸಾವಯವ ಕೃಷಿಕರಾದ ಪ್ರಭುಗೌಡ ಬಿ. ಗೌಡರಡ್ಡಿ ಅವರಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ಮೇಳ–2026ರಲ್ಲಿ ಜಿಲ್ಲಾ ಮಟ್ಟದ ಸಾಧಕ ರೈತ ಪ್ರಶಸ್ತಿ ನೀಡಿ ಗೌರವಿಸಿದೆ.

ಈ ಪ್ರಶಸ್ತಿಯೊಂದಿಗೆ ಪ್ರಭುಗೌಡ ಬಿ. ಗೌಡರಡ್ಡಿ ಅವರಿಗೆ ಒಟ್ಟು ಐದು ಪ್ರಶಸ್ತಿಗಳು ಲಭಿಸಿದಂತಾಗಿದೆ ಸೆ.27ರಂದು ಧಾರವಾಡದಲ್ಲಿ ನಡೆದ ಕೃಷಿ ಮೇಳದಲ್ಲಿ 10 ಎಕರೆ ಬಂಜರು ಭೂಮಿಯನ್ನು ಕೆಲವೇ ವರ್ಷಗಳಲ್ಲಿ ಹಸಿರು ಪರಿಸರ ಹಾಗೂ ಜೀವವೈವಿಧ್ಯದಿಂದ ಕೂಡಿದ ಮಾದರಿ ತೋಟವನ್ನಾಗಿ ಪರಿವರ್ತಿಸಿದ ಸಾಧನೆಗಾಗಿ ಪ್ರಭುಗೌಡ ಗೌಡರಡ್ಡಿ ಅವರನ್ನು ಸನ್ಮಾನಿಸಲಾಯಿತು.

ಎಂಜಿನಿಯರ್ ವೃತ್ತಿಯಿಂದ ಸಾವಯವ ಕೃಷಿಯತ್ತ

1980ರ ಜೂನ್ 1ರಂದು ಜನಿಸಿದ ಪ್ರಭುಗೌಡ ಗೌಡರಡ್ಡಿ ಅವರು ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಸುಮಾರು 16ರಿಂದ 20 ವರ್ಷಗಳ ಕಾಲ ಸುಡಾನ್, ಓಮನ್, ಬಹರೇನ್, ಶಾರ್ಜಾ, ಇರಾಕ್, ಅಬುಧಾಬಿ, ಕತಾರ್, ಈಜಿಪ್ಟ್ ಹಾಗೂ ನಾರ್ತ್ ಸುಡಾನ್ ಸೇರಿದಂತೆ ವಿವಿಧ ದೇಶಗಳಲ್ಲಿ ತೈಲ ಮತ್ತು



ಅನಿಲ ಕ್ಷೇತ್ರದಲ್ಲಿ ಪ್ಲಾನಿಂಗ್ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿದ್ದಾರೆ.

2020ರಲ್ಲಿ ತಮ್ಮ ಹುಟ್ಟೂರಾದ ಬಿ. ಸಾಲವಾಡಗಿಗೆ ಮರಳಿದ ಅವರು 10 ಎಕರೆ ಬಂಜರು ಭೂಮಿಯಲ್ಲಿ ಸಾವಯವ ಕೃಷಿಗೆ ಚಾಲನೆ ನೀಡಿದರು. ಜೀವಾಮೃತ, ಘನಜೀವಾಮೃತ, ಬೀಜಾಮೃತ, ಕೃಷಿ ಹೊಂಡ, ಹನಿ ನೀರಾವರಿ ಹಾಗೂ ಮುಚ್ಚಿಗೆ ಪದ್ಧತಿಗಳನ್ನು ಅಳವಡಿಸಿಕೊಂಡು ಕೃಷಿ ಆರಂಭಿಸಿದರು.

ಇಂದು ಅವರ ತೋಟದಲ್ಲಿ ತೆಂಗು, ಮಾವು, ಬಾಳೆ, ತೇಗ, ಮಹಾಗನಿ, ಶ್ರೀಗಂಧ, ಬೇವು, ಹಲಸು ಸೇರಿದಂತೆ 30ಕ್ಕೂ ಹೆಚ್ಚು ಬಗೆಯ ಬೆಳೆಗಳು ಮತ್ತು ಮರಗಳು ಬೆಳೆಸಲಾಗುತ್ತಿವೆ. ಗಿರ್ ಹಾಗೂ ಸಾಹಿವಾಲ್ ತಳಿಯ ದೇಸಿ ಹಸುಗಳ ಸಾಕಣೆ ಮತ್ತು ಜೇನು ಸಾಕಣೆಯನ್ನೂ ಕೈಗೊಂಡಿದ್ದಾರೆ. ಗಿಡ ನೆಡುವುದರಿಂದ ಹಿಡಿದು ಕೊಯ್ಲಿನವರೆಗೂ ರಾಸಾಯನಿಕ ಮುಕ್ತ ಪದ್ಧತಿಯನ್ನು ಅನುಸರಿಸುತ್ತಿರುವುದು ಅವರ ಕೃಷಿಯ ವಿಶೇಷತೆಯಾಗಿದೆ.

ಐದು ಪ್ರಶಸ್ತಿಗಳ ಗೌರವ

ಪ್ರಭುಗೌಡ ಗೌಡರಡ್ಡಿ ಅವರಿಗೆ ಇದಕ್ಕೂ ಮುನ್ನ ವಿವಿಧ ಕ್ಷೇತ್ರಗಳ ಸಾಧನೆಗಾಗಿ ನಾಲ್ಕು ಪ್ರಶಸ್ತಿಗಳು ಲಭಿಸಿವೆ. 2024ರ ಆಗಸ್ಟ್ 1ರಂದು (ಕರ್ನಾಟಕ ಚಾಪ್ಟರ್) ಹಾಗೂ ಕರ್ನಾಟಕ ಪಶುವೈದ್ಯಕೀಯ ಇಲಾಖೆಯಿಂದ ಉತ್ತಮ ಪಶುಪಾಲಕ ಪ್ರಶಸ್ತಿ, 2024ರ ಆಗಸ್ಟ್ 15ರಂದು ತಾಳಿಕೋಟಿ ತಾಲೂಕು ಆಡಳಿತದಿಂದ ಶ್ರೇಷ್ಠ ರೈತ ಪ್ರಶಸ್ತಿ, 2026ರ ಜೂನ್ 5ರಂದು ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರ ಪಾಲಕ ಪ್ರಶಸ್ತಿ ದೊರೆತಿದೆ.

2023–24ನೇ ಸಾಲಿನಲ್ಲಿ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಕನೇರಿ ಶ್ರೀ ಕ್ಷೇತ್ರ ಸಿದ್ಧಗಿರಿ ಮಹಾಸಂಸ್ಥಾನದಿಂದ ಅತ್ಯುತ್ತಮ ಸಾವಯವ ಕೃಷಿಕ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಇದೀಗ ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ ದೊರೆತ ಜಿಲ್ಲಾ ಮಟ್ಟದ ಸಾಧಕ ರೈತ ಪ್ರಶಸ್ತಿ ಅವರ ಸಾಧನೆಗೆ ಮತ್ತೊಂದು ಗೌರವ ಸೇರ್ಪಡೆಯಾಗಿದೆ.

ಬಂಜರು ಭೂಮಿಯನ್ನು ಹಸಿರಾಗಿಸಿ, ಸಾವಯವ ಕೃಷಿ, ಪಶುಪಾಲನೆ, ಜಲಸಂರಕ್ಷಣೆ ಮತ್ತು ಜೀವವೈವಿಧ್ಯ ಸಂರಕ್ಷಣೆಯನ್ನು ಸಮನ್ವಯಗೊಳಿಸಿರುವ ಅವರ ಮಾದರಿ ತೋಟವು ಸುಸ್ಥಿರ ಕೃಷಿಗೆ ಪ್ರೇರಣಾದಾಯಕವಾಗಿದೆ.

ಮಣ್ಣು ತಾಯಿ, ವಿಷ ಹಾಕಬೇಡಿ, ಮುಚ್ಚಿಗೆ ಹಾಕಿ, ನೀರು ಉಳಿಸಿ ಎಂಬುದು ಪ್ರಭುಗೌಡ ಗೌಡರಡ್ಡಿ ಅವರ ಕೃಷಿ ಮಂತ್ರವಾಗಿದೆ.

ಹಿರಿಯ ನಾಗರಿಕರು ಸಮಾಜದ ಅಮೂಲ್ಯ ಆಸ್ತಿ: ಅರವಿಂದ ಹಾಗರಗಿ

ವಿಜಯಪುರಜೀವನದಮುಸ್ಸಂಜೆಯಲ್ಲಿರುವ ಹಿರಿಯ ನಾಗರಿಕರು ಸಮಾಜದ ಅಮೂಲ್ಯ ಆಸ್ತಿ. ಅವರ ಜೀವನಾನುಭವ, ಜ್ಞಾನ ಮತ್ತು ಮಾರ್ಗದರ್ಶನ ಸದೃಢ ಸಮಾಜ ನಿರ್ಮಾಣಕ್ಕೆ ಅಗತ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಹಾಗರಗಿ ಹೇಳಿದರು.



ನಗರದ ಜಿಲ್ಲಾ ಪಂಚಾಯಿತಿ ಕಚೇರಿಯ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಸಿ.ಬಿ. ಕುಂಬಾರ ಮಾತನಾಡಿ, ಅನುಭವದ ಮಾತುಗಳನ್ನು ಆಲಿಸುವುದರಿಂದ ಜೀವನಕ್ಕೆ ಅಮೂಲ್ಯ ಪಾಠಗಳು ದೊರೆಯುತ್ತವೆ. ಹಿರಿಯರ ಸಲಹೆ ಮತ್ತು ಮಾರ್ಗದರ್ಶನ ಕುಟುಂಬದ ಬೆಳವಣಿಗೆಗೆ ಮಾತ್ರವಲ್ಲದೆ, ಸಮಾಜದ ಪ್ರಗತಿಗೂ ಸಹಕಾರಿಯಾಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಸಂತೋಷ ಎಚ್., ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಸ್. ಪಿ. ಬಿರಾದಾರ ಕಡ್ಲೇವಾಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ, ಬಿ.ಎಲ್.ಡಿ.ಇ. ಸಂಸ್ಥೆಯ ಹಿರಿಯ ನಾಗರಿಕರ ಸೇವಾ ವಿಭಾಗದ ವೈದ್ಯರಾದ ಡಾ. ಅಂಬ್ಲಿಗಿ, ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಎಸ್.ಎಲ್. ಇಂಗಳೇಶ್ವರ ಹಾಗೂ ಡಿವೈಎಸ್ಪಿ ಮುರಿಗೆಪ್ಪ ಉಪಾಸೆ, ವಿಶ್ರಾಂತ ಪ್ರಾಚಾರ್ಯ ಎಸ್.ಎಸ್. ಬಸವರೆಡ್ಡಿ, ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಗದೀಶ ಕೆ. ಇದ್ದರು.

ವಿವಿಧಸ್ಪರ್ಧೆಗಳಲ್ಲಿಭಾಗವಹಿಸಿವಿಜೇತರಾದಹಿರಿಯ ನಾಗರಿಕರಿಗೆ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಿರಿಯ ನಾಗರಿಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಿಬ್ಬಂದಿ ಹಿರಿಯ ನಾಗರಿಕರಿಗೆ ಮಧುಮೇಹ ಮತ್ತು ರಕ್ತದೊತ್ತಡಗಳನ್ನು ಉಚಿತ ತಪಾಸಣೆ ನಡೆಸಿದರು.

ಸ್ಮಶಾನ ಭೂಮಿಗೆ ಮೂಲಸೌಕರ್ಯ ಕಲ್ಪಿಸಲು ಮನವಿ

ವಿಜಯಪುರ: ನಗರದ ಚಲವಾದಿ ಸಮಾಜದ ರುದ್ರ(ಸ್ಮಶಾನ) ಭೂಮಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಚಲವಾದಿ ಸಮಾಜದ ರುದ್ರಭೂಮಿ ಸೇವಾ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಹಾಗೂ ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಸಮಿತಿ ಅಧ್ಯಕ್ಷ ಪ್ರದೀಪ ಚಲವಾದಿ ಮಾತನಾಡಿ, ಸ್ಮಶಾನ ಭೂಮಿಯ ಸುತ್ತ ಕಾಂಪೌಂಡ್, ರಸ್ತೆ ಹಾಗೂ ಗೇಟ್ ನಿರ್ಮಿಸಿ ವಿದ್ಯುತ್ ದೀಪ ಮತ್ತು ನೀರಿನ ವ್ಯವಸ್ಥೆ



ಕಲ್ಪಿಸಬೇಕು. ಎರಡು ಕೊಠಡಿಗಳನ್ನು ನಿರ್ಮಿಸಿ ಪೇಟಿಂಗ್ ಸೇರಿದಂತೆ ಅಗತ್ಯ ಮೂಲಸೌಕರ್ಯ ಒದಗಿಸಬೇಕು ಎಂದು ಮನವಿ ಮಾಡಿದರು.

ಈ ಕುರಿತು ಕಳೆದ ಐದು ವರ್ಷಗಳಿಂದ ಮನವಿ ಸಲ್ಲಿಸುತ್ತಿದ್ದರೂ ಈವರೆಗೆ ಸೂಕ್ತ ಕ್ರಮ ಕೈಗೊಳ್ಳಲಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಈ ಬಗ್ಗೆ ತಕ್ಷಣ ಗಮನಹರಿಸಿ ಅಗತ್ಯ ಸೌಲಭ್ಯ ಕಲ್ಪಿಸಬೇಕು.

ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಶಂಕರ ಚಲವಾದಿ, ರಮೇಶ ಬೋರಗಿ, ಯಮನಪ್ಪ ಸಿದ್ದರಡ್ಡಿ, ಚಂದ್ರು ಕಳ್ಳಿಮನಿ, ನಾಗರಾಜ ನಿಂಗದಳ್ಳಿ, ಸಂತೋಷ ಗಡೇದ, ಶಿವರಾಜ ಚಿಕ್ಕಲಕಿ, ವಿನೋದ ತಳಕೇರಿ, ಸದಾಶಿವ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ತಾಳಿಕೋಟೆಯಲ್ಲಿ ಹಿಂಗಾರು ಬಿತ್ತನೆಗೆ ಬೀಜ ವಿತರಣೆ ಆರಂಭ

ತಾಳಿಕೋಟೆ: ರೈತರಿಗೂ ಅನುಕೂಲವಾಗುವಂತೆ ರೈತ ಸಂಪರ್ಕ ಕೇಂದ್ರದಲ್ಲಿ ಬೀಜ ದಾಸ್ತಾನಿಕರಿಸಿದ್ದು, ಹಿಂಗಾರು ಹಂಗಾಮಿನ ಬಿತ್ತನೆಗೆ ತೊಂದರೆಯಾಗದಂತೆ ಬೀಜ ವಿತರಿಸಲು ಕೃಷಿ ಇಲಾಖೆ ಸನ್ನದ್ಧವಾಗಿದೆ ಎಂದು ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಸನಗೌಡ ಮಾಡಗಿ ತಿಳಿಸಿದರು.

ಪಟ್ಟಣದ ರೈತ ಸಂಪರ್ಕ ಕೇಂದ್ರ ಕಚೇರಿಯಲ್ಲಿ 2026 27ನೇ ಸಾಲಿನ ಹಿಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿ ಮಾತನಾಡಿದರು.

ಕೃಷಿ ಅಧಿಕಾರಿ ಮಹೇಶ ಜೋಷಿ ಮಾತನಾಡಿ, ಹಿಂಗಾರು ಹಂಗಾಮಿನ ಬೀಜಗಳಾದ ಕಡಲೆ ಜೆಜಿ–11 ತಳಿ ಒಟ್ಟು 650 ಕ್ವಿಂಟಲ್ ದಾಸ್ತಾನಿಕರಿಸಿದ್ದು, ಒಂದು ಪಾಕೆಟ್ (20 ಕೆಜಿ) ಬೆಲೆ ಸಾಮಾನ್ಯ ವರ್ಗಕ್ಕೆ 1300 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ 1050 ಬೆಲೆ ಇರುತ್ತದೆ. ಬೀಜೋಪಚಾರಕ್ಕಾಗಿ ಟ್ರೈಕೊಡರ್ಮ ವಿರಿಡೆ ಶಿಲೀಂದ್ರವು ಲಭ್ಯವಿದ್ದು, ಬೀಜೋಪಚಾರ ಕೈಕೊಂಡು ಬಿತ್ತಲು ಸಲಹೆ ನೀಡಿದರು. ಪ್ರತಿ ಖಾತೆಗೆ 3 ಪಾಕಿಟ್ ಕಡಲೆ ಮತ್ತು 2 ಪಾಕಿಟ್ ಇತರೆ ಬೀಜ ವಿತರಿಸಲು ಸರ್ಕಾರವು ನಿರ್ದೇಶಿಸಿದೆ ಎಂದು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ ನಾವದಗಿ ಮುಖಂಡರುಗಳಾದ ನಿಂಗನಗೌಡ ಬಿರಾದಾರ, ಬಸನಗೌಡ ಹಳ್ಳಿಪಾಟೀಲ್,

ಈಸುಗೌಡ ಪಾಟೀಲ ಲಕ್ಕುಂಡಿ, ಆತ್ಮ ಸಂಯೋಜಕ ಸಂಗಮೇಶ ಪಾಟೀಲ, ಲೆಕ್ಕಿಗೆ ರುಕ್ಸಾನಾ ತಾಳಿಕೋಟಿ, ಕಿರಣ ಬೊಮ್ಮನಹಳ್ಳಿ, ಹನುಮಂತರಾಯ ಕುಂಟರೆಡ್ಡಿ, ಬಸವರಾಜ ಜಾಲವಾದಿ, ರಾಮಣ್ಣ ಹರಿಜನ ಕೃಷಿ ಸಖಿಯರು ಮತ್ತು ರೈತರು ಇದ್ದರು.

ಓದುವ ಹವ್ಯಾಸಕ್ಕೆ ಮಕ್ಕಳಿಗೆ ಪ್ರೋತ್ಸಾಹ ಕೊಪ್ಪಳ ವಿವಿ ವಿಶ್ರಾಂತ ಕುಲಪತಿ ಕರೆ



ಕುಷ್ಟಗಿ: 'ದೃಶ್ಯ ಮಾಧ್ಯಮಗಳಲ್ಲಿ ಪ್ರಭಾವಿಯಾಗಿರುವ ಮೊಬೈಲ್‌ನ ಅತಿಯಾದ ಗೀಳಿನಿಂದ ಮಕ್ಕಳಲ್ಲಿನ ಕ್ರಿಯಾಶೀಲತೆ ಕ್ಷೀಣಿಸುತ್ತಿದೆ. ಮಕ್ಕಳನ್ನು ಪುಸ್ತಕ ಓದುವ ನಿಟ್ಟಿನಲ್ಲಿ ಪ್ರೇರೇಪಿಸುವುದು ತೀರಾ ಅವಶ್ಯ' ಎಂದು ಕೊಪ್ಪಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎಸ್.ವಿ.ಡಾಣಿ ಹೇಳಿದರು.

ಪಟ್ಟಣದಲ್ಲಿ ಬುಧವಾರ ಸಾಹಿತಿ ಅಮರೇಗೌಡ ಜಾಲಿಹಾಳ ಅವರ 'ಜೀವಸತ್ವ–ಸವಿಜೇನು' ಕೃತಿ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಕಥೆ, ಕಾವ್ಯ, ನಾಟಕ ಹೀಗೆ ವಿವಿಧ ಸಾಹಿತ್ಯ ಪ್ರಾಕಾರಗಳ ಕುರಿತು ಯುವಕರು, ಮಕ್ಕಳಲ್ಲಿ ಆಸಕ್ತಿ ಮೂಡಿಸಲು ಪೋಷಕರು ಹಾಗೂ ಸಮಾಜ ಪ್ರಯತ್ನಿಸಬೇಕು' ಎಂದರು.

ಮೂಲತಃ ಕಂದಕೂರ ಗ್ರಾಮದ ಹಾಗೂ ರಾಜಸ್ಥಾನದ ಜೈಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ರಮೇಶ ಗುಮಗೇರಾ ಮಾತನಾಡಿ, ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಂಪರೆ ವಿಷಯದಲ್ಲಿ ನೆರೆ ರಾಜ್ಯಗಳಲ್ಲಿಯೂ ಸಾಕಷ್ಟು ಅಭಿಮಾನಿಗಳು ಇರುವುದು ಕಂಡುಬರುತ್ತದೆ: ಎಂದರು.

ಸಾಹಿತಿ ಶೇಖರಗೌಡ ಸರನಾಡಗೌಡರ ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಶಿಕ್ಷಕ ನಟರಾಜ ಸೋನಾರ ಕೃತಿ ಪರಿಚಯಿಸಿದರು. ವಣಗೇರಿ ಬಸವ ಜ್ಞಾನ ಆಶ್ರಮದ ಯಶವಂತ ಶರಣರು ಸಾನ್ನಿಧ್ಯ ವಹಿಸಿದ್ದರು.

ಉಪನ್ಯಾಸಕ ನಾಗರಾಜ ಹೀರಾ, ಶಿಕ್ಷಕ ಜೀವನಸಾಬ ವಾಲೀಕಾರ, ಹನುಮಂತಪ್ಪ ಈಟಿಯವರ, ಕೆ.ಮಹೇಶ, ಮಹಾಂತೇಶ ಬದಾಮಿ, ಬಸವರಾಜ ಬಿನ್ನಾಳ, ಕಸಾಪ ಅಧ್ಯಕ್ಷ ಲಂಕೆಪ್ಪ ವಾಲಿಕಾರ, ಸರೋಜಿನಿ ಮರಡಿ, ಮೋಹನಲಾಲ್ ಜೈನ್, ಕೃತಿಕಾರ ಅಮರೇಗೌಡ ಜಾಲಿಹಾಳ, ಹನುಮೇಶ ಗುಮಗೇರಿ ಇತರರು ಮಾತನಾಡಿದರು.

ಅನೇಕ ಸಾಹಿತ್ಯಾಸಕ್ತರು, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರಾಜ್ಯಮಟ್ಟಕ್ಕೆ ಕೊಪ್ಪಳದ ನೆಟ್‌ಬಾಲ್ ತಂಡಗಳು ಆಯ್ಕೆ

ಕೊಪ್ಪಳ: ವಿಭಾಗಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ಮೊದಲ ಸ್ಥಾನ ಪಡೆದ ಕೊಪ್ಪಳ ಜಿಲ್ಲಾ ನೆಟ್‌ಬಾಲ್ ಸಂಸ್ಥೆಯ ಪುರುಷರ ಹಾಗೂ ಮಹಿಳಾ ತಂಡಗಳು ಮೈಸೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿವೆ.



ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪುರುಷರ ಹಾಗೂ ಮಹಿಳೆಯರ ವಿಭಾಗದ ಕೊಪ್ಪಳದ ತಂಡಗಳು ಫೈನಲ್‌ನಲ್ಲಿ ವಿಜಯನಗರ ಜಿಲ್ಲೆಯ ಶ್ರೀಕರಿ ಪಿಯು ಕಾಲೇಜು ಎದುರು ಗೆಲುವು ಸಾಧಿಸಿತು. ಮಹಿಳಾ ತಂಡ 18 1ರಿಂದ ಏಕಪಕ್ಷೀಯವಾಗಿ ಮತ್ತು ಪುರುಷರ ತಂಡ 143 ಅಂಕಗಳಿಂದ ಗೆಲುವು ಸಾಧಿಸಿತು.

ಅಬ್ದುಲ್ ರಜಾಕ್ ಟೇಲರ್ ನಾಯಕತ್ವದಲ್ಲಿ ಮಂಜುನಾಥ ಗೊಂಡಬಾಳ, ಶಿವಕುಮಾರ ಹಟ್ಟಿ, ಮಂಜುನಾಥ ಚೌಡಕಿ ಕುಷ್ಟಗಿ, ಬಾಲಕೃಷ್ಣ ಹಲಗೇಕರ, ಆಂಜನೇಯ, ಅಬೂಬಕರ್, ಭೀಮೇಶ ಕುಡಗುಂಟಿ, ಮಹ್ಮದ್ ಆಫಾನ್ ಮೊಗಲ್, ಆದಿತ್ಯ ಬಡೆಘರ್, ಶಿವರಾಜ ಭೋವಿ, ಅರ್ಹಾನ್ ಹಾಗೂ ಮಹಿಳಾ ತಂಡ ಸಾಹಿತ್ಯ ಎಂ. ಗೊಂಡಬಾಳ ನಾಯಕತ್ವದಲ್ಲಿ ಅದಿತಿ ನಾಡಗೌಡ, ಸೃಷ್ಟಿ ಗುದ್ಯಾಪಗೋಳ, ಸೋನಾಕ್ಷಿ ಅಳ್ಳೊಳ್ಳರ್, ಅಕ್ಷರ ಎಂ. ಗೊಂಡಬಾಳ, ರಿತುಶ್ರೀ ಮೋತರ್, ಸಿಮ್ರಾ ಮುಲ್ಲಾ, ಗೌರಿ ಸಟ್ಟೆಗೇರಿ, ಸೀತಾ ಗೌರವ, ಶಮಾ ಬಿಸರಳ್ಳಿ, ಆಸ್ಫಿಯಾ ಬಡೇಘರ್, ಆದಿತಿ ಗವಡೆ ತಂಡದ ಸದಸ್ಯರಾಗಿದ್ದರು.

ವಿಜೇತರಿಗೆ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿಠ್ಠಲ್ ಜಾಬಗೌಡರ್, ಮೈ ಭಾರತ್ ಯುವ ಸಮನ್ವಯಾಧಿಕಾರಿ ಮೇಘ್ನಾ,

ಕ್ರೀಡಾ ಇಲಾಖೆ ಖೋಕೋ ಕೋಚ್ ಯತಿ–ರಾಜ, ಇಲಾಖೆಯ ಹನುಮೇಶ ಅವರು ಬಹುಮಾನ ವಿತರಿಸಿದರು.

ಒಳಪಂಗಡ ಮರೆತು ಒಂದಾಗಲು ವೀರಶೈವ ಲಿಂಗಾಯತ ಸಮಾಜಕ್ಕೆ ಅಮರೇಗೌಡ ಬಯ್ಯಾಪೂರ ಸಲಹೆ

ಗಂಗಾವತಿ: 'ವೀರಶೈವ ಲಿಂಗಾಯತ ಸಮಾಜ ಒಳಪಂಗಡ ಮರೆತು ಸಂಘಟಿ–ತರಾದಾಗ ಮಾತ್ರ ರಾಜಕೀಯ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಯಾಗಲು ಸಾಧ್ಯ' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಉಪಾಧ್ಯಕ್ಷ ಅಮರೇಗೌಡ ಬಯ್ಯಾಪೂರ ಅಭಿಪ್ರಾಯಪಟ್ಟರು.



ನಗರದ ಜಯನಗರದ ಕುವೆಂಪು ಬಡಾವಣೆಯಲ್ಲಿ ಮಹಿಳಾ ಘಟಕದ ಅಧ್ಯಕ್ಷರ ಮನೆಯಲ್ಲಿ ಗುರುವಾರ ನಡೆದ ಮಹಿಳಾ ಘಟಕದ ಸದಸ್ಯರಿಗೆ ಗುರುತಿನ ಚೀಟಿ ವಿತರಣೆ ಹಾಗೂ ಮಹಾಸಭಾದ ನೂತನ ಉಪಾಧ್ಯಕ್ಷ ಪರಣ್ಣ ಮುನವಳ್ಳಿ ಅವರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಚೆಗೆ ಸರ್ಕಾರ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಯಲ್ಲಿ ಲಿಂಗಾಯತ ಸಮಾಜದ ಜನಸಂಖ್ಯೆ ಅತ್ಯಂತ ಕಡಿಮೆಯಿದೆ ಎಂಬ ವರದಿ ಬಂದಿವೆ. ಇದ–ಕ್ಕೆ ವೀರಶೈವ ಲಿಂಗಾಯತ ಸಮಾಜದಲ್ಲಿನ ಒಳ ಪಂಗಡದ ಭಿನ್ನಾಭಿಪ್ರಾಯಗಳೇ ಕಾರಣ. ರಾಜ್ಯದ ಬಹುತೇಕ ಕಡೆ, ವೀರಶೈವ ಲಿಂಗಾಯತ ಸಮಾಜದವರು ಗಣತಿಯ ಜಾತಿ ಕಾಲಿನಲ್ಲಿ ಒಳ ಪಂಗಡದ ಹೆಸರು ಬರೆಯಿಸಿದ್ದು ಈ ಸಮಸ್ಯೆಗೆ ಕಾರಣವಾಗಿದೆ' ಎಂದರು.

ವೀರಶೈವ ಲಿಂಗಾಯತ ಸಮಾಜ ನಾವೆಲ್ಲ ಒಂದೇ ಎಂಬ ಭಾವನೆಯಲ್ಲಿ ಬದುಕುವ ಅಗತ್ಯವಿದೆ. ಮಹಾಸಭಾದಿಂದ ಜಿಲ್ಲಾ ಮಟ್ಟದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಕುಷ್ಟಗಿಯಲ್ಲಿ ಅ.18ರಂದು ಆಯೋಜಿಸಲಾಗಿದ್ದು, ಗಂಗಾವತಿ ತಾಲ್ಲೂಕಿನ ಎಲ್ಲ ಪದಾಧಿಕಾರಿಗಳು ಆಗಮಿಸಬೇಕು' ಎಂದು ಹೇಳಿದರು.

ನೂತನ ರಾಜ್ಯ ಉಪಾಧ್ಯಕ್ಷ ಪರಣ್ಣ ಮುನವಳ್ಳಿ ಮಾತನಾಡಿ,'ಮಹಿಳಾ ಘಟಕ ಮತ್ತು ಯುವ ಘಟಕದ ಪದಾಧಿಕಾರಿಗಳು ಸಮುದಾಯದ ಹೆಚ್ಚೆಚ್ಚು ಜನರಿಗೆ ಮಹಾಸಭಾದ ಸದಸ್ಯರಾಗಿ ಮಾಡಬೇಕು. ಆರ್ಥಿಕವಾಗಿ ಸಬಲರಿದ್ದವರು ಪೋಷಕ, ಮಹಾ ಪೋಷಕರಂತಹ ಸದಸ್ಯತ್ವ ಪಡೆದು, ಸಮಾಜದ ಅಭಿವೃದ್ಧಿ ತಮ್ಮದೇ ಆದ ಕೊಡುಗೆ ನೀಡಬೇಕು' ಎಂದು ಹೇಳಿದರು.

ನಂತರ ಮಹಿಳಾ ಸದಸ್ಯರಿಗೆ ಗುರುತಿನ ಚೀಟಿ ವಿತರಣೆ ಮಾಡಲಾಯಿತು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಗಂಗಾವತಿ ತಾಲ್ಲೂಕು ಘಟಕದ ಎಚ್.ಗಿರಿಗೌಡ, ನಿಕಟಪೂರ್ವ ತಾಲ್ಲೂಕು ಅಧ್ಯಕ್ಷ ಅಶೋಕ ಸ್ವಾಮಿ ಹೇರೂರು, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಮನೋಹರಸ್ವಾಮಿ ಮುದೇನೂರು , ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ನಂದಿನಿ ಮು ದಗಲ್, ಗಾಳಿ ರುದ್ರಪ್ಪ, ಶರಣೇಗೌಡ ಮಾಲೀ ಪಾಟೀಲ, ವಿ.ಪಿ.ಪಟ್ಟಣಶೆಟ್ಟರ, ಯುವ ಘಟಕದ ಅಧ್ಯಕ್ಷ ಶರಣಬಸ ವ ಹುಲಿಹೈದರ, ಪ್ರಧಾನ ಕಾರ್ಯದರ್ಶಿ ಶಿಲ್ಪಾ ಶ್ರೀನಿವಾಸ, ಖಜಾಂಚಿ ಮಂಜುಳಾ ಗಾಳಿ, ಸಿಂಚನಾ ಮಂಜುನಾಥ ಉಪಸ್ಥಿತರಿದ್ದರು.

ಪದವೀಧರ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ನಿರುಪಾದಿ ಅವಿರೋಧ ಆಯ್ಕೆ



ಕನಕಗಿರಿ: ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ 2026 31ನೇ ಸಾಲಿನ ಅಧ್ಯಕ್ಷರಾಗಿ ಹಿರೇಡಂಕನಕಲ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ನಿರುಪಾದಿ, ಪ್ರಧಾನ ಕಾರ್ಯದರ್ಶಿಯಾಗಿ ಹನುಮನಾಳ ಗ್ರಾಮದ ಶಿಕ್ಷಕ ಬಸವರಾಜ ಹಾಗೂ ಖಜಾಂಚಿಯಾಗಿ ನವಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸೈನಾಜಬೇಗಂ ಅವಿರೋಧವಾಗಿ ಆಯ್ಕೆಯಾದರು.

ಇಲ್ಲಿನ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಮೂರು ಹುದ್ದೆಗಳಿಗೆ ತಲಾ ಒಂದು ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಅವಿರೋಧ ಆಯ್ಕೆ ನಡೆಯಿತು. ಚುನಾವಣಾಧಿಕಾರಿ ಪರಸಪ್ಪ ಹೊರಪೇಟೆ ಆಯ್ಕೆಯನ್ನು ಘೋಷಿಸಿದರು.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷೆ ಶಂಶಾದಬೇಗಂ, ಪ್ರಧಾನ ಕಾರ್ಯದರ್ಶಿ ಉಮೇಶ ಕಂದಕೂರು, ನಿರ್ದೇಶಕ ಶೇಖರಯ್ಯ ಕಲ್ಮಠ, ಶಿಕ್ಷಕರ ಪತ್ತಿನ ಸಹಕಾರಿ ಸಂಘದ ತಾಲ್ಲೂಕು ಉಪಾಧ್ಯಕ್ಷ ಪರಶುರಾಮ, ನಿಕಟಪೂರ್ವ ಕಾರ್ಯದರ್ಶಿ ನಾಗರಾಜ ಸೇರಿದಂತೆ ಪದಾಧಿಕಾರಿಗಳು, ಶಿಕ್ಷಕರು ಇದ್ದರು.

ಕಾರ್ಖಾನೆ ವಿಸ್ತರಣೆಗೆ ನಮ್ಮ ವಿರೋಧ: ಹಿಟ್ನಾಳ

ಕೊಪ್ಪಳ: 'ಕ್ಷೇತ್ರದ ವ್ಯಾಪ್ತಿಯಲ್ಲಿ ಈಗಾಗಲೇ ಸಾಕಷ್ಟು ಕಾರ್ಖಾನೆಗಳಿವೆ. ಹೊಸ ಕಾರ್ಖಾನೆಗಳ ಸ್ಥಾಪನೆ ಅಥವಾ ಇರುವ ಕಾರ್ಖಾನೆಗಳ ವಿಸ್ತರಣೆ ಬೇಡ ಎಂಬುದು ನಮ್ಮ ನಿಲುವು. ಆದರೆ ಕೇಂದ್ರ ಸರ್ಕಾರವೇ ಅನುಮತಿ ನೀಡಿದರೆ ನಾವು ಏನು ಮಾಡಬೇಕು' ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಪ್ರಶ್ನಿಸಿದರು.

ಮುಕಂದ್ ಸುಮಿ ಸ್ಟೀಲ್ ಕಾರ್ಖಾನೆ ವಿಸ್ತರಣೆಗೆ ಮುಂದಾಗಿರುವ ಹಿನ್ನೆಲೆಯಲ್ಲಿ ಮಂಗಳವಾರ ಪರಿಸರ ಸಂಬಂಧಿತ ಸಾರ್ವಜನಿಕ ಆಲಿಕೆ ಸಭೆ ನಡೆದಿತ್ತು. ಈ ಕುರಿತು ಬುಧವಾರ ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದಾಗ, 'ಸಾರ್ವಜನಿಕ ಆಲಿಕೆ ಸಭೆಗೆ ನನಗೆ ಯಾರೂ ಆಹ್ವಾನ ನೀಡಿಲ್ಲ. ಕೇಂದ್ರ ಸರ್ಕಾರವನ್ನು ಕೇಳಿದರೆ ಎಲ್ಲವೂ ಗೊತ್ತಾಗುತ್ತದೆ.

ಆದರೆ ಕಾರ್ಖಾನೆ ವಿಸ್ತರಣೆಗೆ ನಮ್ಮ ವಿರೋಧವಿದೆ' ಎಂದು ಹೇಳಿದರು.

ಬಳ್ಳಾರಿಯಲ್ಲಿ ಮೆಗಾ ಡೇರಿಗೆ ಕೆಎಂಆರ್‌ಸಿಯಿಂದ ಒಪ್ಪಿಗೆ ದೊರೆತಿದೆ. ಕೊಪ್ಪಳದಲ್ಲಿಯೂ ಬಲ್ಕ್ ಕೂಲರ್ ಕೇಂದ್ರ ಸ್ಥಾಪಿಸಲಾಗುವುದು' ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ವಿರೋಧ ಪಕ್ಷದವರು ವಿನಾಕಾರಣ ಆರೋಪ ಮಾಡುತ್ತಿದ್ದಾರೆ.

ಅವುಗಳಲ್ಲಿ ಯಾವುದೇ ಹುರುಳಿಲ್ಲ. ಕ್ಷೇತ್ರದ ಗ್ರಾಮೀಣ ಪ್ರದೇಶಗಳಿಗೆ ನಮ್ಮೊಂದಿಗೆ ಬನ್ನಿ. ಅಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳನ್ನು ತೋರಿಸುತ್ತೇವೆ' ಎಂದು ಹೇಳಿದರು.

ಕನಕಗಿರಿ ತಾಲ್ಲೂಕು ಪಂಚಾಯಿತಿಯಲ್ಲಿ ವಿಕಿಪಿಪಿ ತಯಾರಿಕೆ ಪ್ರಕ್ರಿಯೆ ತರಬೇತಿ



ಕನಕಗಿರಿ: ಗ್ರಾಮೀಣ ಭಾಗದಲ್ಲಿನ ಆದ್ಯತೆ–ಯ ಕಾಮಗಾರಿಗಳನ್ನು ಗುರುತಿಸಿ, ಅವುಗಳನ್ನು ಕ್ರಮಬದ್ಧವಾಗಿ ಅನುಷ್ಠಾನ ಮಾಡಲು ಪ್ರತಿಯೊಬ್ಬರ ಪಾತ್ರ ಬಹುಮುಖ್ಯವಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಪ್ರಭಾರ ಇಒ ಕೆ.ರಾಜಶೇಖರ ತಿಳಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ವಿಕಸಿತ ಗ್ರಾಮ ಪಂಚಾಯತಿ ಯೋಜನೆ(ವಿಕಿಪಿಪಿ) ತಯಾರಿಕೆ ಪ್ರಕ್ರಿಯೆ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.


ಯಾವುದೇ ಒಂದು ಯೋಜನೆ ಅನುಷ್ಠಾನ ಮಾಡಲು ಮೊದಲು ಆ ಯೋಜನೆ ತಯಾರಿ–ಕೆ ಪ್ರಕ್ರಿಯೆ ಆರಂಭವಾಗುತ್ತದೆ ಅದರಂತೆ ವಿಕಸಿತ ಗ್ರಾಮ ಪಂಚಾಯತಿ ಯೋಜನೆ ತಯಾರಿಕೆಯ ಪ್ರಕ್ರಿಯೆಯಲ್ಲಿ ಮುಂದಿನ ದಿನಗಳಲ್ಲಿ ಯಾವ ರೀತಿಯ ಆದ್ಯತೆಯ ಕಾಮಗಾರಿಗಳನ್ನು ಹೇಗೆ ಹಾಗೂ ಯಾವ ರೀತಿಯಲ್ಲಿ ಅನುಷ್ಠಾನ ಮಾಡಲು ತರಬೇತಿಯನ್ನು ಆಯೋಜಿಸಿದ್ದು ಇದರ ಮಾಹಿತಿಯನ್ನು ಸಂಪೂರ್ಣ ಪಡೆದುಕೊಳ್ಳಬೇಕು' ಎಂದರು.

ಜಿಲ್ಲಾ ಪಂಚಾಯಿತಿಯ ಸಹಾಯಕ ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ ಹಾಗೂ ಸಂಪನ್ಮೂಲ ವ್ಯಕ್ತಿ ಮಹಾಂತಸ್ವಾಮಿ ತರಬೇತಿ ಕುರಿತು ಮಾಹಿತಿ ನೀಡಿದರು.

ಈ ವೇಳೆ ಸಹಾಯಕ ನಿರ್ದೇಶಕ ನಾಗೇಶ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಂಯೋಜಕರು ಇದ್ದರು.

ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಸಮನ್ವಯ ಅಗತ್ಯ : ಜಿ. ಶ್ರೀಧರ್

ಗಂಗಾವತಿ: ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು ಜೋಡಿ ಹಕ್ಕಿಯಂತೆ ಸಮನ್ವಯದಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಸಹಕಾರಿ ಸಂಸ್ಥೆಗಳ ಸಮಗ್ರ ಬೆಳವಣಿಗೆ ಸಾಧ್ಯ ಎಂದು ಸಂಯುಕ್ತ ಸಹಕಾರ ಸಂಘದ ನಿರ್ದೇಶಕ ಜಿ. ಶ್ರೀಧರ್ ಹೇಳಿದರು.



ನಗರದ ಲಲಿತ್ ಮಹಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ ಇತ್ತೀಚೆಗೆ ನೋಂದಣಿಯಾದ ಸೌಹಾರ್ದ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಆಯೋಜಿಸಿದ್ದ ಪ್ರವೇಶ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೊಪ್ಪಳ ಜಿಲ್ಲೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ. ಸಂಘಗಳು ಬೆಳೆಯುತ್ತಿದ್ದಂತೆ ಅವುಗಳ ಜವಾಬ್ದಾರಿಯೂ ಹೆಚ್ಚಾಗುತ್ತದೆ. ಆದ್ದರಿಂದ ಆರಂಭದಿಂದಲೇ ಕಾನೂನಿನ ಚೌಕಟ್ಟಿನಲ್ಲಿ ಕಾಯ್ದೆ ಹಾಗೂ ನಿಯಮಗಳನ್ನು ರೂಪಿಸಿಕೊಂಡು, ಅವುಗಳನ್ನು ಸಮರ್ಪಕವಾಗಿ ಪಾಲಿಸಿ ಕಾರ್ಯನಿರ್ವಹಿಸುವುದು ಅಗತ್ಯ' ಎಂದು ತಿಳಿಸಿದರು. ತರಬೇತಿಯ ಮೊದಲ ಅವಧಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಲೆಕ್ಕಪರಿಶೋಧನೆಯ ಪೂರ್ವಸಿದ್ಧತೆ ಕುರಿತು ಮಾಹಿತಿ ನೀಡಲಾಯಿತು. ಎರಡನೇ ಅವಧಿಯಲ್ಲಿ ಆಡಳಿತ ಮಂಡಳಿಯ ಅಧಿಕಾರ ಮತ್ತು ಕರ್ತವ್ಯಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿಗಳ ಕುರಿತು ತಿಳಿಸಲಾಯಿತು.

ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷ ನಾಗಲಿಂಗಪ್ಪ ಘತ್ತಾರ, ಜಿಲ್ಲಾ ಒಕ್ಕೂಟದ ನಿರ್ದೇಶಕ ಕುಮಾರೆಪ್ಪ, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಓಂಕಾರ, ಸಂಯುಕ್ತ ಸಹಕಾರಿಯ ಸಿಬ್ಬಂದಿ ಕೋಟೆಪ್ಪ, ಮಂಜುನಾಥ ಇದ್ದರು.

ಚುನಾವಣಾ ಆಯುಕ್ತರ ಬಂಧನಕ್ಕೆ ಒತ್ತಾಯಿಸಿ ಕೊಪ್ಪಳದಲ್ಲಿ ಪ್ರತಿಭಟನೆ



ಕೊಪ್ಪಳ: ಭಾರತ ಚುನಾವಣಾ ಆಯೋಗ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಬಂಧಿಸಬೇಕು, ವೋಟ್ ಚೋರಿ ಮೂಲಕ ಅಧಿಕಾರಕ್ಕೆ ಬಂದ ಕೇಂದ್ರ ಸರ್ಕಾರವನ್ನು ವಜಾ ಮಾಡಬೇಕು ಎಂದು ಒತ್ತಾಯಿಸಿ ನಗರದ ಅಶೋಕ ವೃತ್ತದಲ್ಲಿ ಮಂಗಳವಾರ ಪ್ರಗತಿಪರ, ಜನಪರ ಹಾಗೂ ಕಾರ್ಮಿಕ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಚುನಾವಣಾ ಆಯೋಗದ ಸಾಂವಿಧಾನಿಕ ಪಾವಿತ್ರ್ಯತೆ ಎತ್ತಿಹಿಡಿಯಬೇಕು, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರಕ್ಷಿಸಬೇಕು. ಪ್ರಮುಖ ಕಾನೂನಾತ್ಮಕ ಮತ್ತು ಸಾಂವಿಧಾನಿಕ ಅಂಶಗಳನ್ನು ರಕ್ಷಿಸಬೇಕು, ಎಸ್‌ಐಆರ್ ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಮುಖಂಡ ಕಾಸೀಮ ಸರ್ದಾರ್, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಮುಖ್ಯ ಸಂಚಾಲಕ ಬಸವರಾಜ ಶೀಲವಂತರ,

ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್, ಐ.ಎಫ್.ಟಿ.ಯು ಜಿಲ್ಲಾ ಸಂಚಾಲಕ ತುಕಾರಾಮ್ ಪಾತ್ರೋಟಿ, ಮುಖಂಡರಾದ ಚಾಂದ್ ಪಾಷಾ, ಮುದುಕಪ್ಪ ಹೊಸಮನಿ, ಮಖಬೂಲ್ ರಾಯಚೂರು,

ಹನುಮೇಶ ಕಲ್ಮಂಗಿ, ಜಾಫರ್ ಕುರಿ, ಗಾಳೆಪ್ಪ ಮುಂಗೋಲಿ, ಸುಭಾನ್ ಸಾಬ್, ಷಣ್ಮುಖಪ್ಪ, ಮೀರಾಸಾಬ್ ಬನ್ನಿಗೊಳ, ಆದಿತ್ಯ ಟಿ. ಪಾತ್ರೋಟಿ ಪಾಲ್ಗೊಂಡಿದ್ದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ: ಮೀನಾಕ್ಷಿ ಬಣ್ಣದಭಾವಿ

ಕೊಪ್ಪಳ: ಎಲ್ಲ ರೋಗಗಳ ಮೂಲ ಸ್ವಚ್ಛತೆಯಲ್ಲಿದೆ. ಪ್ರತಿಯೊಬ್ಬರೂ ತಮ್ಮ ಮನೆ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಮೀನಾಕ್ಷಿ ಬಣ್ಣದಭಾವಿ ಹೇಳಿದರು.



ಕೊಪ್ಪಳ ಇನ್ನರ್ ವೀಲ್ ಕ್ಲಬ್ 316ರ ಆವರಣದಲ್ಲಿ 'ಕ್ಲೀನ್ ಆಯಂಡ್ ಗ್ರೀನ್ ಕ್ಯಾಂಪಸ್' ಶೀರ್ಷಿಕೆಯಡಿ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸ್ವಚ್ಛತೆ ಕಾಪಾಡುವುದರ ಜೊತೆಗೆ ನೀರು ಹಾಗೂ ಜೀವಜಲ ಅಮೂಲ್ಯವಾಗಿದ್ದು, ಅದನ್ನು ಮಿತವಾಗಿ ಬಳಸಬೇಕು.

ರೋಗಗಳಿಂದ ರಕ್ಷಣೆ ಪಡೆಯಲು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಅಗತ್ಯ. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು. ನೈರ್ಮಲ್ಯ, ಪರಿಸರ ಸಂರಕ್ಷಣೆ ಹಾಗೂ ಸಮುದಾಯದ ಜವಾಬ್ದಾರಿಯನ್ನು ಸಾರುವ 'ಗ್ರೋ ಆಯಂಡ್ ಫ್ಲರಿಶ್' ಧ್ಯೇಯದಡಿ ಸ್ನೇಹ ಮತ್ತು ಸೇವೆಯ ಸಂಕೇತವಾಗಿ ಆಯೋಜಿಸಿರುವ ಸ್ವಚ್ಛಭಾರತ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದು ಮೀನಾಕ್ಷಿ ಬಣ್ಣದಭಾವಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಕ್ಲಬ್ ಕಾರ್ಯದರ್ಶಿ ಶ್ರೀದೇವಿ ಪಾಟೀಲ್, ಎಡಿಟರ್ ಮಾಲಾ ಎಸ್. ಕಂಚಿ, ಐಎಸ್‌ಒ ಲತಾ ಪಟ್ಟಣಶೆಟ್ಟಿ, ಸದಸ್ಯರಾದ ಪಾರ್ವತಿ ಪಾಟೀಲ್, ಶಾರದಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಯಕ್ಷಗಾನದಂತೆ ಬಯಲಾಟಕ್ಕೂ ಪ್ರಾಶಸ್ತ್ಯ ನೀಡಿ ಎಂದ ಕಲಾವಿದರು

ಕನಕಗಿರಿ: 'ಕರಾವಳಿ ಭಾಗದ ಯಾವುದೇ ಕಾರ್ಯಕ್ರಮಗಳಲ್ಲಿ ಯಕ್ಷಗಾನಕ್ಕೆ ಪ್ರಾಶಸ್ತ್ಯ ನೀಡಿದಂತೆ ರಾಜ್ಯದ 29ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ

ವೈವಿದ್ಯಮಯವಾಗಿರುವ ಬಯಲಾಟ ಕಲೆ ಉಳಿಯಲು ಸರ್ಕಾರ ಹೆಚ್ಚು ಆದ್ಯತೆ ನೀಡಬೇಕಾಗಿದೆ' ಎಂದು ಜಿಲ್ಲಾ ಬಯಲಾಟ ಕಲಾವಿದರ ಸಂಘದ ಅಧ್ಯಕ್ಷ ನಾಗರಾಜ ಇಂಗಳಗಿ ತಿಳಿಸಿದರು.



ಇಲ್ಲಿನ ಜೂಲಕೇರಿ ಓಣಿಯಲ್ಲಿ ತಾಲ್ಲೂಕು ಬಯಲಾಟ ಕಲಾವಿದರ ಸಂಘದ ಪದಾಧಿಕಾರಿಗಳ ಆಯ್ಕೆಯ ಸಭೆಯಲ್ಲಿ ಅವರು ಮಾತನಾಡಿದರು.

ಕಾರಟಗಿ ಸೇರಿದಂತೆ ಜಿಲ್ಲೆಯಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂದು ಅವರು ಮನವಿ ಮಾಡಿದರು.

ಪ್ರೋತ್ಸಾಹದ ಕೊರತೆಯಿಂದ ಬಯಲಾಟ ಕಲೆಯ ಕಡೆಗೆ ಜನರ ಆಸಕ್ತಿ ಕಡಿಮೆಯಾಗುತ್ತಿದೆ,

ಯುವ ಸಮುದಾಯವನ್ನು ಸೆಳೆಯುವ ನಿಟ್ಟಿನಲ್ಲಿ ಎಲ್ಲರೂ ಸಾಂಘಿಕ ಪ್ರಯತ್ನ ಮಾಡಬೇಕಾಗಿದೆ. ಸರ್ಕಾರದ ಅನುದಾನ ಪಡೆದು ನಡೆಸುವ ಉತ್ಸವ, ಸಮ್ಮೇಳನ, ಇತರೆ ಕಾರ್ಯಕ್ರಮಗಳಲ್ಲಿ ಬಯಲಾಟ ಕಲೆ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದರೆ ಕಲಾವಿದರಿಗೆ ಪ್ರದರ್ಶನ ವೆಚ್ಚ ತಗ್ಗಲಿದ್ದು, ಕಲೆ ಉಳಿಯುವುದರ ಜತೆಗೆ ಕಲಾವಿದರಿಗೆ ಉತ್ತೇಜನ ನೀಡಿದಂತಾಗುತ್ತದೆ' ಎಂದು ಹೇಳಿದರು.

ಕಲಾವಿದರಿಗೆ ಮಾಶಾಸನ, ವಿಮೆ ಹಾಗೂ ಸರ್ಕಾರಿ ಸೌಲಭ್ಯ ಒದಗಿಸಲು ಸಂಘ ಬದ್ಧವಾಗಿದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಾವಿದರಿಗೆ ಗುರುತಿನ ಚೀಟಿ ನೀಡುತ್ತಿದೆ, ಅರ್ಜಿ ಸಲ್ಲಿಕೆಗೆ ಸೆಪ್ಟಂಬರ್ 30 ಕೊನೆಯ ದಿನವಾಗಿದೆ, ಕಲಾವಿದರು ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ಪ್ರಯೋಜನ ಪಡೆಯಬೇಕು' ಎಂದು ವಿವರಿಸಿದರು.

ಬಯಲಾಟ ಕಲಾವಿದರ ಸಂಘದ ತಾಲ್ಲೂಕು ಕಾರ್ಯದರ್ಶಿ ವೆಂಕಟೇಶ್ ದಂಡೀನ್ ಸೇರಿದಂತೆ ಇತರರು ಇದ್ದರು.

PUBLIC FAST KANNADA DAILY NEWS PAPER

ದಿನಾಂಕ : 06–10–2026

ಹಿಂಗಾರು ಬಿತ್ತನೆ ಬೀಜ ವಿತರಣೆ ಸವದತ್ತಿ ತಾಲ್ಲೂಕಿನಲ್ಲಿ ಆರಂಭ



ಯರಗಟ್ಟಿ: ಹಿಂಗಾರು ಬಿತ್ತನೆ ಆರಂಭವಾಗಿದ್ದು, ಮಣ್ಣಿನ ತೇವಾಂಶ ಅನುಗುಣವಾಗಿ ಜೋಳ, ಕಡಲೆ, ಗೋಧಿ ಬಿತ್ತನೆ ಕೈಕೊಳ್ಳುವಂತೆ ಸವದತ್ತಿ ತಾಲ್ಲೂಕು ಕೃಷಿ ಅಧಿಕಾರಿ ಶಿವಪ್ರಕಾಶ ಪಾಟೀಲ ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸಿ ಮಾತನಾಡಿದ ಅವರು, ಬಿತ್ತನೆಗೂ ಮೊದಲು ಬೀಜೋಪಚಾರ, ಜೈವಿಕ, ಸಾವಯುವ ಗೊಬ್ಬರ ಬಳಿಕೆಯಿಂದ ಹೆಚ್ಚಿನ ಇಳುವರಿ ಪಡೆಯಬಹುದು ಎಂದು ಸಲಹೆ ನೀಡಿ–ದರು, ತಹಶಿಲ್ದಾರ್ ಎಂ.ವಿ.ಗುಂಡಪ್ಪಗೋಳ ಅಧ್ಯಕ್ಷತೆ ವಹಿಸಿದ್ದರು.

ಎಪಿಎಂಸಿ ಅಧ್ಯಕ್ಷ ನೀಲಕಂಠ ಶಿದ್ದಬಸವ್ವವರ, ಕನ್ನಡ ಸಂಘಟನೆಯ ಅಧ್ಯಕ್ಷ ರಫೀಕ್ ಡಿ.ಕೆ, ಭೀಮಶಿ ದಳವಾಯಿ, ಗ್ಯಾರಂಟಿ ಯೋಜನೆ ಅಧ್ಯಕ್ಷ ಗೋಪಾಲ ದಳವಾಯಿ, ಕೃಷಿ ಸಮಾಜದ ಉಪಾಧ್ಯಕ್ಷ ಶಿವನಾಯ್ಕ ನಾಯ್ಕರ, ಶಿವಾನಂದ ಕರಿಗೋಣ್ಣವರ, ಶಿಂಧೂರಿ ತಗ್ಗಿ, ರಾಮಕೃಷ್ಣ ಎಳ್ಳಮ್ಮಿ, ಯಕ್ಕರೇಪ್ಪ ಮಾಳಗಿ, ಸೋಮು ರೈನಾಪೂರ ಇದ್ದರು.

ಕ್ರೀಡೆಗಳಲ್ಲಿ ಭಾಗವಹಿಸುವುದು ಮುಖ್ಯ ಎಂದ ಎಸ್.ಆರ್. ನೂರಜೆ



ಕಾಗವಾಡ: ಕ್ರೀಡೆಯಲ್ಲಿ ಸೋಲು– ಗೆಲವು ಅನಿಶ್ಚಿತವಾಗಿದ್ದು, ಗೆಲುವಿನ ಸಂಭ್ರಮ, ಸೋಲಿನ ದುಃಖ ಕ್ಷಣಿಕವಾಗಿವೆ. ವಿದ್ಯಾರ್ಥಿಗಳು ಸೋಲನ್ನು ಸವಾಲಾಗಿ ಸ್ವೀಕರಿಸಿ, ಜೀವನದಲ್ಲಿ ಯಶಸ್ವಿಯಾಗಬೇಕೆಂದು ಕಾಗವಾಡ ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಆರ್. ನೂರಜೆ ಹೇಳಿದರು.

ಕಾಗವಾಡ ಪಟ್ಟಣದ ವಿಧ್ಯಾಸಾಗರ ಶಿಕ್ಷಣ ಸಂಸ್ಥೆಯ ಮೈದಾನದಲ್ಲಿ ಜಿಲ್ಲಾ ಪಂಚಾಯಿತಿ ಬೆಳಗಾವಿ ಶಾಲಾ ಶಿಕ್ಷಣ ಇಲಾಖೆ ಕಾಗವಾಡ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ 2026–27 ನೇ ಸಾಲಿನ 14/17 ವಯೋಮಿತಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ತಾಲೂಕು ಮಟ್ಟದ ಕ್ರೀಡಾಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ ಎನ್ ಗಾಣಿಗೇರ, ನೌಕರರ ಸಂಘದ ಅಧ್ಯಕ್ಷ ಎಸ್ ಎಸ್ ಭಾವಿ,ಅಜೀತ ಮಗದುಮ್ಮಭರತ ಬಿಲವಾಡೆ, ಎಂ.ವೈ. ಪೂಜಾರಿ, ಭರತ ಟೋಣಗೆ,ಸಿ ಎಂ ಸಂತೋಷ, ಎಲ್ ಕೆ ಅರವಾಡಿ,ಎ ಎಸ್ ಪಾಟೀಲ,ಕೆ ವ್ಹಿ ಕಾಂಬಳೆ,ಎ ಎಚ್ ಮದಾಳೆ ಇದ್ದರು.

ಮಹಾಪುರುಷರ ಆದರ್ಶಗಳನ್ನು ಅವರ ಜಯಂತಿ ದಿನದಂದು ನೆನಪಿಸಿಕೊಂಡರೆ ಮಾತ್ರ ಸಾಲದು



ಜಮಖಂಡಿ : ನನ್ನ ಜೀವನವೇ ನನಗೆ ದೊಡ್ಡ ಹುದ್ದೆ ಎಂಬ ಸಂದೇಶ ಸಾರಿದ ಮಹಾತ್ಮಾ ಗಾಂಧೀಜಿಯವರ ಆದರ್ಶ ಮತ್ತು ಮಾಜಿ ಪ್ರಧಾನ ಮಂತ್ರಿಯಾಗಿದ್ದ ಲಾಲಬಹಾದ್ದೂರ ಶಾಸ್ತ್ರಿ ಅವರು ದೇಶದ ಭದ್ರತೆ–ಗೆ ಕೈಗೊಂಡ ನಿರ್ಧಾರ ಜನರು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಮುಖ್ಯ ಶಿಕ್ಷಕಿ ಶ್ರೀಮತಿ ಪ್ರೇಮಾ ಉಳ್ಳಿಗಡ್ಡಿ ಹೇಳಿದರು.

ತಾಲೂಕಿನ ಹುನ್ನೂರ ಗ್ರಾಮದ ವೀಣಾ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆ ಆವರಣದಲ್ಲಿ ಶುಕ್ರವಾರ ಮಹಾತ್ಮಾ ಗಾಂಧೀಜಿ ಮತ್ತು ಲಾಲ ಬಹದ್ದೂರ ಶಾಸ್ತ್ರಿ ಅವರ ಜಯಂತಿಕಾರ್ಯಕ್ರಮದಲ್ಲಿಭಾವಚಿತ್ರಕ್ಕೆಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಮಹನಿಯರನ್ನು ಕೇವಲ ಜಯಂತಿ ದಿನದಂದು ನೆನಪಿಸಿಕೊಂಡರೆ ಸಾಲದು, ಅವರ ತತ್ವಾದರ್ಶಗಳು, ಪ್ರಾಮಾಣಿಕತೆ ಮತ್ತು ಸ್ವಚ್ಛತೆಯ ಅರಿವು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಾವೆಲ್ಲರೂ ಪ್ರಾಮಾಣಿಕರಾಗಿ ದೇಶದ ಪ್ರಗತಿಗೆ ಶ್ರಮಿಸೋಣ. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಮೂಲಕ ಅಸ್ಪೃಶ್ಯತೆ ನಿವಾರಣೆ ಮತ್ತು ಸ್ವಚ್ಛತೆ ಕುರಿತು ಮಹತ್ವ ನೀಡಿದ್ದರು.

ಇಂದಿನ ಆಧುನಿಕ ಯುಗದಲ್ಲಿ ಮಹಾತ್ಮಾ ಗಾಂಧೀಜಿ ಮತ್ತು ಲಾಲಬಹದ್ದೂರ ಶಾಸ್ತ್ರಿ ಅವರ ವಿಚಾರಗಳು ನಮಗೆ ದಾರಿ ದೀಪವಾಗಿವೆ. ಪ್ರಾಮಾಣಿಕತೆ, ಅಹಿಂಸೆ ಮತ್ತು ಸ್ವಚ್ಛತೆ ಜೀವನಲ್ಲಿ ಅಳಡಿಸಿಕೊಳ್ಳಬೇಕು ಎಂದರು.

ವೇದಿಕೆಯಲ್ಲಿ ಸಂಸ್ಥೆ ಅಧ್ಯಕ್ಷ ಮಲ್ಲೇಶ ಆಳಗಿ, ಸಹಶಿಕ್ಷಕಿಯರಾದ ಸುರೇಖಾ ರಬಕವಿ, ಅಕ್ಷತಾ ಶಿವಣಗಿ, ಶಿಶು ಪಾಲಕಿ ಬಿಸ್ಮಿಲಾ ಬೆಸಗಾರ ಸಹಿತ ವಿದ್ಯಾರ್ಥಿಗಳು ಹಾಜರಿದ್ದರು.

ದೇಶಕ್ಕೆ ಗಾಂಧೀಜಿ, ಲಾಲ್ ಬಹದ್ದೂರ ಶಾಸ್ತ್ರಿ ಅವರ ಕೊಡುಗೆ ಅಪಾರ



ರಬಕವಿ–ಬನಹಟ್ಟಿ : ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಾಗೂ ರಾಷ್ಟ್ರ ನಿರ್ಮಾಣಕ್ಕೆ ಮಹಾತ್ಮಾ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಕೊಡುಗೆ ಅಪಾರವಾಗಿದೆ ಎಂದು ರಬಕವಿ–ಬನಹಟ್ಟಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯೆ ಶ್ರೀಮತಿ ಚಂದ್ರಪ್ರಭಾ ಬಾಗಲಕೋಟ ಹೇಳಿದರು.

ಶುಕ್ರವಾರಕಾಲೇಜಿನಆವರಣದಲ್ಲಿಗಾಂಧೀಜಿಹಾಗೂ ಲಾಲ್ ಬಹದ್ದೂರ ಶಾಸ್ತ್ರಿ ಜಯಂತಿ ನಿಮಿತ್ತ ಅವರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ ಮಾತನಾಡಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ಅಹಿಂಸೆ ಮತ್ತು ಸತ್ಯಾಗ್ರಹದ ಮಾರ್ಗವನ್ನು ಅನುಸರಿಸಿ ಜನರಲ್ಲಿ ರಾಷ್ಟ್ರೀಯತೆಯ ಭಾವನೆ ಮೂಡಿಸಿದರು. ಶಾಸ್ತ್ರಿ ಅವರು ಸ್ವತಂತ್ರ ಭಾರತದ ಅಭಿವೃದ್ಧಿಗೆ ಪ್ರಧಾನಿ ಹುದ್ದೆ ವಹಿಸಿಕೊಂಡು ಮಹತ್ವದ ಕೊಡುಗೆ ನೀಡಿದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸತ್ಯಪ್ಪ ಕರಿಗಾರ, ಸಂಜಯ ಮಹಾಜನ, ಸುನೀಲ ಸುತಾರ, ದೀಪಾ ಅಜ್ಜಪ್ಪಗೋಳ, ವಿದ್ಯಾ ಸಿದ್ದಾಪುರ, ವಾಣಿ ಭಜಂತ್ರಿ, ಯಮನಪ್ಪ ನಡುವಿನಮನಿ,

ಮಾರುತಿಬಸಪ್ಪಗೋಳಹಾಗೂವಿದ್ಯಾರ್ಥಿನಿಯರಾದ ಶ್ರೀದೇವಿ ಹಾದಿಮನಿ, ಪಲ್ಲವಿ ಸಾರವಾಡ, ಅಶ್ವಿನಿ ಗಾಯಕವಾಡ, ಪ್ರತೀಕ್ಷಾ ಗುಟ್ಲಿ, ಬಸವರಾಜ ಕುಡಚಿ, ಬಸವರಾಜ ಸಾಬಣ್ಣವರ, ಅಭಿಷೇಕ ಪಾಟೀಲ ಭಾಗವಹಿಸಿದ್ದರು.

ಮಳಿಗೆಗಳ ಟೆಂಡರ್ ರದ್ದತಿಗೆ ಆಗ್ರಹಿಸಿ ಮನವಿ ಸಲ್ಲಿಕೆ



ಬೈಲಹೊಂಗಲ: ನಗರದ ಸಾರಿಗೆ ಬಸ್ ನಿಲ್ದಾಣ ಆವರಣದಲ್ಲಿ ನಿರ್ಮಿಸುತ್ತಿರುವ ಮಳಿಗೆಗಳ ಟೆಂಡರ್‌ನ್ನು ಕೂಡಲೇ ರದ್ದುಪಡಿಸಬೇಕು. ಸಾರ್ವಜನಿಕರ ಹಾಗೂ ಲಿಡಕರ್ ಕುಟೀರಗಳಲ್ಲಿ ವ್ಯಾಪಾರ ನಡೆಸುತ್ತಿರುವ ಕುಟುಂಬಗಳ ಹಿತ ಕಾಪಾಡಬೇಕು ಎಂದು ಒತ್ತಾಯಿಸಿ ಶಿವಶರಣ ಸಮಗಾರ ಹರಳಯ್ಯ ಸಮಾಜ ಸಂಘದ ಸದಸ್ಯರು ಶಿರಸ್ತೇದಾರ ಬಸವರಾಜ ಹುಬ್ಬಳ್ಳಿ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

ಸಂಘದ ಅಧ್ಯಕ್ಷ ಪರಶುರಾಮ ರಾಯಬಾಗ, ಸಾರಿಗೆ ಬಸ್ ನಿಲ್ದಾಣ ಆವರಣದಲ್ಲಿ ಈಗಾಗಲೇ ಸಂಚಾರ–ಕ್ಕೆ ಸೀಮಿತ ಸ್ಥಳಾವಕಾಶವಿದ್ದು, ಹೊಸ ಮಳಿಗೆಗಳನ್ನು ನಿರ್ಮಿಸುವುದರಿಂದ ಬಸ್‌ಗಳ ಸಂಚಾರಕ್ಕೆ, ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಬಸ್ ನಿಲ್ದಾಣದ ಹೊರಭಾಗಕ್ಕೆ ಹೊಂದಿಕೊಂಡಿರುವ ಲಿಡಕರ್ ಕುಟೀರಗಳಲ್ಲಿ 17 ಕುಟುಂಬಗಳು ಕಳೆದ 50 60 ವರ್ಷಗಳಿಂದ ಪಾದರಕ್ಷೆ ವ್ಯಾಪಾರ, ದುರಸ್ತಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿವೆ.

ಹೊಸ ಮಳಿಗೆಗಳ ನಿರ್ಮಾಣದಿಂದ ಅಂಗಡಿಗಳಿಗೆ ತೊಂದರೆಯಾಗುವುದಲ್ಲದೆ ಕುಟುಂಬಗಳ ಜೀವನೋಪಾಯಕ್ಕೆ ಧಕ್ಕೆಯಾಗಲಿದೆ ಎಂದರು.

ಸೆ.9ರಂದು ಘಟಕದ ಎದುರು ಅಹೋರಾತ್ರಿ ಧರಣಿ ನಡೆಸಲಾಗಿದ್ದು, ಬೆಳಗಾವಿ ಸಾರಿಗೆ ಡಿಸಿ ಸ್ಥಳಕ್ಕೆ ಆಗಮಿಸಿ, 17 ಕುಟುಂಬಗಳ ಅಂಗಡಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸದಿದ್ದರೆ ರಾಜ್ಯಾದ್ಯಂತ ಹರಳಯ್ಯ ಸಮಾಜ ಸಂಘದ ವತಿಯಿಂದ ಹೋರಾಟ ನಡೆಸುವುದರ ಜೊತೆಗೆ ಬೈಲಹೊಂಗಲ ಬಂದ್‌ಗೆ ಕರೆ ನೀಡಲಾಗುವುದು ಎಂದು ಎಚ್ಚರಿಸಿದರು.

ಸುಭಾಸ ಸವದತ್ತಿ, ಬುದ್ದಿವಂತ ಕಟ್ಟಿಮನಿ, ಮಂಜುನಾಥ ಅಗಾಶಿ, ವಿನಾಯಕ ಮುರಗೋಡ, ಬಸವರಾಜ ಕಿತ್ತೂರು, ಗಣಪತಿ ಕಾಂಬಳೆ, ಅಶೋಕ ಸವದತ್ತಿ, ಉಮೇಶ ದೊಡಮನಿ, ಮಂಜುನಾಥ ರಾಮದುರ್ಗ, ಶ್ರೀಕಾಂತ ದೊಡಮನಿ, ವಿನೋದ ಸವದತ್ತಿ, ಆಕಾಶ ರಾಯಭಾಗ, ರಾಜೇಶ ತೋರಗಲ್ಲ, ರಾಮು ಕೇಳಂಕರ, ಅರ್ಜುನ ರಾಯಬಾಗ, ಪರಶುರಾಮ ಬನ್ನಿಗಿಡದ ಇದ್ದರು.

ವಚನ ಸಾಹಿತ್ಯ ಆಧ್ಯಾತ್ಮಿಕ ಸಂದೇಶ ಸಾರುವ ಕೃತಿಯಾಗಿದೆ



ಮೂಡಲಗಿ: 'ವಚನ ಸಾಹಿತ್ಯ ಓದುಗರಿಗೆ ಆಧ್ಯಾತ್ಮಿಕ ಸಂದೇಶವನ್ನು ಸಾರುವ ಜೊತೆಗೆ ಪ್ರಪಂಚದ ವಾಸ್ತವ ತಿಳಿಸಿಕೊಡುವ ಕೃತಿಯಾಗಿದೆ' ಎಂದು ಮೂಡಲಗಿ ತಾಲ್ಲೂಕು ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಚಿದಾನಂದ ಹೂಗಾರ ಹೇಳಿದರು.

ತಾಲ್ಲೂಕಿನ ರಂಗಾಪುರದ ಶಂಭುಲಿಂಗ ಆಶ್ರಮದಲ್ಲಿ ತಾಲ್ಲೂಕು ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಕವಿ ಮನೆಯೊಳ್ ಕಾವ್ಯಾವಲೋಕನ ಕಾರ್ಯಕ್ರಮದಲ್ಲಿ ಮಾತನಾಡಿದರು.


ಅಧ್ಯಕ್ಷತೆವಹಿಸಿಮಾತನಾಡಿದಬಾಲಶೇಖರ ಬಂದಿ 'ಕವಿ ಮನೆಗೆ ಹೋಗಿ ಅವರ ಕಾವ್ಯ ಕೃತಿಯ ಅವಲೋಕನ ಮಾಡುವ ಕಾರ್ಯ ನಿಜಕ್ಕೂ ಶ್ಲಾಘನೀಯವಾಗಿದೆ. ಎಲೆಮರೆ ಕಾಯಿಯಂತಿರುವ ಸಾಹಿತಿಗಳ ಕಾವ್ಯ ಕೃತಿಯನ್ನು ಮತ್ತೆ ಅವಲೋಕನ ಮಾಡುವ ಮೂಲಕ ಲಕ್ಕಣ್ಣ ಶರಣರಂತವರ ವಚನಗಳ ಪ್ರಸ್ತುತತೆಯನ್ನು ತಿಳಿಯುವಂತಾಗಿದೆ' ಎಂದರು.

ಕವಿ ಋಷಿಪುತ್ರಸ್ವಾಮಿಗಳವರು ಮಾತನಾಡಿ ಸಹೃದಯ ಶರಣರು ಸೇರಿಕೊಂಡು ಕವಿಮನೆಗೆ ಬಂದು ಕವಿಯ ಕಾವ್ಯವನ್ನು ಅವಲೋಕನ ಮಾಡುವ ಮೂಲಕ 16 ವರ್ಷಗಳ ಹಿಂದೆ ಬಿಡುಗಡೆಯಾದ ವಚನ ಒರೆಗಲ್ಲು ಕೃತಿಗೆ ಪುನರ್ಜನ್ಮ ನೀಡಿ ಕವಿಗಳಿಗೆ ಪ್ರೋತ್ಸಾಹಿಸಿದ್ದು ಸಂತಸ ತಂದಿದೆ ಎಂದರು.

ಶಿವಾನಂದ ವಾಗೂಲೆ ಕವಿ ಪರಿಚಯ ಮಾಡಿದರು.

ಡಾ. ಮಹಾದೇವ ಪೋತರಾಜ, ಪ್ರಕಾಶ ಮೇತ್ರಿ, ನಿಂಗಪ್ಪ ಸಂಗ್ರೇಜಿಕೊಪ್ಪ, ದುರ್ಗಪ್ಪ ದಾಸನ್ನವರ, ಬಾಳೇಶ ಫಕೀರಪ್ಪನವರ, ಸುಭಾಷ ಕುರಣೆ, ಮೆಹಬೂಬ್ ಶೇಖಬಡೆ, ರಾಮಣ್ಣ ದಳವಾಯಿ,
ಸಿದ್ದಣ್ಣ ನಡಗಡ್ಡಿ,
ಶಿವಬಸಪ್ಪ ಡೊಂಬರ, ಬಾಳೇಶ ತುಬಾಕಿ, ವಿಜಯ ಡೊಂಬರ, ಗಿರಿಮಲ್ಲಪ್ಪ ಗಿರೆಣ್ಣವರ ಇದ್ದರು.

ಗಾಂಧೀಜಿ ಚಿಂತನೆ ಅಳವಡಿಸಿಕೊಳ್ಳಿ ಎಂದ ಅಶೋಕ ಪಟ್ಟಣ



ರಾಮದುರ್ಗ: ಮಹಾತ್ಮ ಗಾಂಧೀಜಿ ಅವರ ಸತ್ಯ, ಅಹಿಂಸೆ ತತ್ವಗಳನ್ನು ಇಂದಿನ ದಿನಗಳಲ್ಲಿ ಪರಿಚಯಿಸುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಕ್ಷೇತ್ರಗಳು ಕೆಲಸ ಮಾಡಬೇಕಿದೆ ಎಂದು ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಪ್ರತಿಪಾದಿಸಿದರು.

ಪಟ್ಟಣದ ಸಿ.ಎಸ್. ಬೆಂಬಳಗಿ ಕಾಲೇಜಿನಲ್ಲಿ ಗಾಂಧಿ ಜಯಂತಿ ಅಂಗವಾಗಿ ಬರೋಡಾ ಬ್ಯಾಂಕ್, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ವತಿಯಿಂದ ಹಮ್ಮಿಕೊಂಡಿದ್ದ ಮುಕ್ತ ಭಾಷಣ ಸ್ಪರ್ಧೆಯ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿ ವಿದ್ಯಾ ಪ್ರಸಾರಕ ಸಮಿತಿ ಅಧ್ಯಕ್ಷ ಎಸ್. ಎಸ್.ಸುಲ್ತಾನಪುರ, ಮಹಾತ್ಮ ಗಾಂಧಿ ಅವರ ಆದರ್ಶ ಜೀವನ, ಅಹಿಂಸಾ ತತ್ವವನ್ನು ಇಂದಿನ ಪೀಳಿಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಬರೋಡಾ ಬ್ಯಾಂಕ್ ಶಾಖೆಯ ವ್ಯವಸ್ಥಾಪಕ ಹಣಮಂತ್ರಾಯ ಬಿರಾದಾರ ಮಾತನಾಡಿದರು.

ಮುಕ್ತ ಭಾಷಣ ಸ್ಪರ್ಧೆಯಲ್ಲಿ ಸುಮಾರು 80ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು.ವಿದ್ಯಾಪ್ರಸಾರಕ ಸಮಿತಿ ಸದಸ್ಯವೈ.ಬಿ.ಕುಲಗೋಡ, ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಐ.ಛಾಯಪ್ಪಗೋಳ, ಶಿವುಕುಮಾರ ವುಡಮುಡಿ, ಪ್ರಾಚಾರ್ಯಡಾ.ಪ್ರಕಾಶತೆಗ್ಗಿಹಳ್ಳಿ, ಉಪನ್ಯಾಸಕ ಮೈಲಾರಿ ಸಿದ್ಧಗಿರಿ, ಎಂ.ಬಿ.ಪಾಟೀಲ ಇದ್ದರು.

ಕ್ರೀಡೆಗಳಿಂದ ಮಕ್ಕಳ ಮನೋಸ್ಥೈರ್ಯ ವೃದ್ಧಿಯಾಗುತ್ತದೆ: ಶಾಸಕ ಸವದಿ



ರಬಕವಿ–ಬನಹಟ್ಟಿ : ಮಕ್ಕಳ ಸರ್ವಾಂಗೀಣ ಪ್ರಗತಿಗೆ ಕ್ರೀಡೆಗಳು ಪೂರಕವಾಗಿದ್ದು, ಮಕ್ಕಳ ಮನೋಸ್ಥೈರ್ಯ ವೃದ್ಧಿಸಲು ಕ್ರೀಡೆಗಳು ಸಹಕಾರಿಯಾಗಿವೆ. ದೈಹಿಕ, ಮಾನಸಿಕ ಸ್ವಾಸ್ಥ್ಯ ಕಾಪಾಡುವ ಜೊತೆ–ಗೆ ಪರಸ್ಪರ ಸಮನ್ವಯತೆಯ ಗುಣವೂ ಮಕ್ಕಳಲ್ಲಿ ಹೆಚ್ಚುತ್ತದೆಂದು ಶಾಸಕ ಸಿದ್ದು ಸವದಿ ಹೇಳಿದರು.

ಸಮೀಪದ ಹನಗಂಡಿ ಗ್ರಾಮದ ಸರ್ ಸಿ.ವಿ.ರಾಮನ್ ಆಂಗ್ಲ ಮತ್ತು ಕನ್ನಡ ಮಾಧ್ಯಮ ಪ್ರೌಢ ಶಾಲೆಯಲ್ಲಿ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಸಹಯೋಗದಲ್ಲಿ ಜಿಲ್ಲಾ ಮಟ್ಟದ 14– ರಿಂದ 17 ವಯೋಮಾನದ ಬಾಲಕ, ಬಾಲಕಿಯರ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಕ್ರೀಡೆಯಲ್ಲಿ ಗೆಲವು ಸಾಧನೆ ಮುಖ್ಯವಾಗದೇ ಪಾಲ್ಗೊಳ್ಳುವಿಕೆ ಪ್ರಧಾನ. ಶಿಸ್ತು,ಸರ್ವಾಂಗೀಣಅಭಿವೃದ್ಧಿ,ಆತ್ಮವಿಶ್ವಾಸ, ಸಮಯಪ್ರಜ್ಞೆ, ನಾಯಕತ್ವದ ಗುಣ ಹಾಗೂ ತಂಡದೊಡನೆ ಸಮನ್ವಯತೆಯಿಂದ ಕೆಲಸ ನಿರ್ವಹಿಸುವ ಮನೋಭಾವ ಬೆಳೆಸಲು ಕ್ರೀಡೆಗಳು ಸಹಕಾರಿಯಾಗಿವೆ ಎಂದರು.

ಬಿಇಓಅಶೋಕಬಸಣ್ಣವರಕ್ರೀಡೆಗಳುಕೇವಲ ಸೋಲು–ಗೆಲವುಗಳ ಮಾನದಂಡವಾಗದೇ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಸಕ್ಷಮತೆ ಹೆಚ್ಚಿಸುವ ಜೊತೆಗೆ ಸಹಕಾರ ಭಾವನೆ ಅರಳಿಸುತ್ತವೆ. ಕ್ರೀಡಾಕೂಟಗಳು ಭವಿಷ್ಯದ ಕ್ರೀಡಾ ಪಟುಗಳನ್ನು ರೂಪಿಸುವ ವೇದಿಕೆಗಳಾಗಿದ್ದು, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಕ್ಕಳು ಪ್ರತಿಭೆ ಮೆರೆದು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸಾಧನೆ ತೋರಿ ಮುಂದಿನ ಭಾರತದ ಕ್ರೀಡಾ ಪ್ರತಿನಿಧಿಗಳಾಗ ಬೇಕೆಂದರು.

ಈ ಸಂದರ್ಭದಲ್ಲಿ ತಾಲೂಕು ದೈಹಿಕ ಶಿಕ್ಷಣ ನಿರ್ದೇಶಕಿ ಟಿ. ಎಸ್. ನಂದೇಶ, ಸಂಗಮೇಶ ವಿಜಾಪುರ, ದಸ್ತಗೀರಸಾಬ ದಿಗ್ಗೇವಾಡಿ, ಬಸವರಾಜ ಹನಗಂಡಿ, ರಫೀಕ್ ದಿಗ್ಗೇವಾಡಿ, ಕಾಡೇಶ ಕೋಲೂರ, ಪಿ.ಎಸ್. ವೇಳೆಸಿಂಗರೆಡ್ಡಿ, ನೀಲೇಶ ದೇಸಾಯಿ, ಶರಫುದ್ದೀನ್ ಅಲಾಸ, ಅಕ್ರಮ ಅಲಾಸ, ಧರೆಪ್ಪ ಹುದ್ದಾರ, ಅನೀಲ ಗುಬಚಿ, ಸಚಿನ್ ಮುರಗುಂಡಿ, ಚೇತನ್ ದೇಸಾಯಿ, ಶೇಖರ ಹಳ್ಳಿಮಟ್ಟಿ, ಬಾಳೇಶಗೌಡ ಪಾಟೀಲ, ಬಾಷಾಲಾಲ ಅಲಾಸ, ಶಾಲಾ ಸಿಬ್ಬಂದಿ, ಮಕ್ಕಳು ಭಾಗವಹಿಸಿದ್ದರು.

ಆರನೇ ತರಗತಿವರೆಗೆ ಕನ್ನಡ ಕಡ್ಡಾಯಗೊಳಿಸಿ–ಗುಡಗುಂಟಿ



ಜಮಖಂಡಿ : ಕನ್ನಡ ಉಳಿಯಬೇಕು; ಅದನ್ನು ಉಳಿಸುವ ಮೂಲಕ ನಾವೆಲ್ಲರೂ ಬೆಳೆಸಬೇಕಾಗಿದೆ. ನಮ್ಮ ಮಕ್ಕಳಿಗೆ ಕನಿಷ್ಠ ಒಂದನೇ ತರಗತಿಯಿಂದ ಆರನೇ ತರಗತಿಯವರೆಗೆ ಕನ್ನಡ ಮಾಧ್ಯಮ ಕಡ್ಡಾಯಗೊಳಿಸಬೇಕು.

ಸರಕಾರಿ ಕಛೇರಿಗಳಲ್ಲಿ, ವಿವಿಧ ಸಂಘ ಸಂಸ್ಥೆಗಳಲ್ಲಿ ಮತ್ತು ನ್ಯಾಯಾಲಯಗಳಲ್ಲಿ ಕನ್ನಡ ಬಳಕೆ ಆಗುತ್ತಿದ್ದಾಗ್ಯೂ ಕೂಡ, ಸಾರ್ವಜನಿಕರಲ್ಲಿ ಇಂಗ್ಲೀಷ್ ಭಾಷೆಯ ವ್ಯಾಮೋಹ ಇನ್ನೂ ಕಡಿಮೆಯಾಗುತ್ತಿಲ್ಲ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ಸಾಕ್ಷಾತ್ಕಾರ ಸಭಾಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಚಾರ ಸಾಮಗ್ರಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ನಗರದ ಬಸವಭವನ ಸಭಾಭವನದಲ್ಲಿ ಅಕ್ಟೋಬರ ನಾಲ್ಕರಂದು ಹತ್ತನೇ ಕನ್ನಡ ಸಾಹಿತ್ಯ ಪರಿಷತ್ ಸಮಾರಂಭದಲ್ಲಿ ಧ್ವಜಾರೋಹಣ, ಬೃಹತ್ ಮೆರವಣಿಗೆ, ಸಾಹಿತ್ಯಿಕ ಗೋಷ್ಠಿಗಳು, ವಿಶೇಷ ಉಪನ್ಯಾಸ ಮತ್ತು ಸಮ್ಮೇಳನ ಅಧ್ಯಕ್ಷರೊಂದಿಗೆ ಸಂವಾದ, ಸಮಾವೇಶದಲ್ಲಿಯ ನಿರ್ಣಯಗಳ ಮಂಡನೆ, ನಂತರ ಅದ್ದೂ–ರಿಯಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಜಮಖಂಡಿ ನಗರದ ಕನ್ನಡ ಸಂಘದ ಅಧ್ಯಕ್ಷರಾಗಿ ಯುವ ಧುರೀಣ ರಾಹುಲ ಕಲೂತಿ ಆಯ್ಕೆಗೊಂಡಿದ್ದು, ನವೆಂಬರ್ ಒಂದರಂದು ನಡೆಯಲಿರುವ ಕನ್ನಡ ರಾಜ್ಯೋತ್ಸವ ಅದ್ದೂರಿಯಾಗಿ ನಡೆಯುವ ಭರವಸೆ ನಮಗಿದೆ ಎಂದರು.

ಕಸಾಪ ಕಾರ್ಯಾಧ್ಯಕ್ಷ ಶಿವಾನಂದ ಪಾಟೀಲ ಮಾತನಾಡಿ, ಭಾಷಾಭಿಮಾನ ಪ್ರತಿಯೊಬ್ಬರಲ್ಲಿಯೂ ಅವಶ್ಯಕವಿದೆ. ನಾವು ಬೇರೆ ಭಾಷೆಯನ್ನು ಓಲೈಸುವ ಭರದಲ್ಲಿ ನಮ್ಮ ನೆಲದ ಸಾಹಿತ್ಯ, ಕನ್ನಡ ಭಾಷೆಯ ಮೌಲ್ಯಗಳು, ಬದುಕಿನ ಮೌಲ್ಯಗಳು, ನೈತಿಕ ಮೌಲ್ಯಗಳು, ಒಡನಾಟಗಳು ದೂರವಾಗುತ್ತಿವೆ. ಬದುಕಿನಲ್ಲಿ ಅರ್ಥ ಮಾಡಿಕೊಳ್ಳ ಬೇಕಾದಂತಹ ಅವಶ್ಯಕತೆ ಇದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಮಾತನಾಡಿ, ಕನ್ನಡಭಾಷೆಉಳಿಯಬೇಕು,ಬೆಳೆಯಬೇಕು. ಕಲಾವಿದರನ್ನು ಸಾಹಿತಿಗಳನ್ನು ಪ್ರೋತ್ಸಾಹಿಸುವ ಮೂಲಕ ಸೂಕ್ತವಾದ ವೇದಿಕೆಯನ್ನು ಕನ್ನಡ ಸಾಹಿತ್ಯ ಪರಿಷತ್ ನಿರ್ಮಿಸುತ್ತಿದೆ. ಇಲ್ಲಿಯವರೆಗೆ ಒಟ್ಟು ಹತ್ತು ಸಮ್ಮೇಳನಗಳನ್ನು ಮಾಡಲಾಗಿದೆ.

ಹತ್ತನೇ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನಕ್ಕಾಗಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಗುತ್ತಿದೆ.ಅಕ್ಟೋಬರ್‌ನಾಲ್ಕರಂದು ಬೆಳಿಗ್ಗೆ ಏಳು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ನಾಡು ನುಡಿಗಾಗಿ ವಿಶೇಷ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸುವ ಮೂಲಕ ಉತ್ತಮ ಪ್ರತಿಭೆಗೆ ಅವಕಾಶ ನೀಡಲಾಗುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಕೋಶಾಧ್ಯಕ್ಷ ನಾಗಪ್ಪ ಸನದಿ, ಸಾಹಿತಿ ರುದ್ರಗೌಡ ಪಾಟೀಲ, ಸಾಹಿತಿ ಬಸವರಾಜ ಕಡ್ಡಿ, ಪತ್ರಕರ್ತರಾದ ಮಲ್ಲೇಶ ಆಳಗಿ, ಲಕ್ಷ್ಮಿಕಾಂತ ದುದಗಿ, ಡಾ.ಟಿ.ಪಿ.ಗಿರಡ್ಡಿ, ಪ್ರಭು ಹಿಡಕಲ್, ಉಮೇಶ ಸಿದರಡ್ಡಿ ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.

ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಾತ್ಮ ಗಾಂಧೀಜಿ, ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಆಚರಣೆ

ಮುಂಡರಗಿ:ತಾಲೂಕಿನಡಂಬಳಗ್ರಾಮದ(ಡಿ.ಪಿ.ಇ.ಪಿ)ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ 157 ನೇ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಯವರ 122ನೇ ಜಯಂತಿಯನ್ನು ಆಚರಿಸಲಾಯಿತು.

ಇದೇ ವೇಳೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಶಾಂತಪ್ಪಕಂಬಳಿ, ಎಸ್ಡಿಎಂಸಿ ಅಧ್ಯಕ್ಷ ಗವಿಸಿದ್ದಪ್ಪ ಹಾದಿಮನಿ, ಶಾಲೆಯ ವಿವಿಧ ವಿಷಯಗಳ ಶಿಕ್ಷಕರಾದ ವೀಣಾ ಅಥಣಿ, ರೆಹನಾ ಬೇಗಂ ಅಕ್ಕಿ, ಪುಷ್ಪಾ ಲಮಾಣಿ, ಶಾಂತಾ ಲಮಾಣಿ, ಚೈತ್ರಾ ವಾಲ್ಮೀಕಿ, ಮತ್ತು ಅತಿಥಿ ಶಿಕ್ಷಕರಾದ ಸಾವಿತ್ರಿ ಮಾಳೆಕೊಪ್ಪ, ಪ್ರಿಯಾಂಕಾ ಮೇಗೂರ, ಮಹಾಂತೇಶ ಸಜ್ಜನವರ, ಬೋಧಕೇತರ ಸಿಬ್ಬಂದಿ ವರ್ಗದವರು, ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಮತ್ತಿತರರು ಉಪಸ್ಥಿತರಿದ್ದರು.



Printed by Published by ASHWARYA PALLATE on behalf of ASHWARYA PALLATE, Printed at DHARIDEEPA PRINTERS & PUBLISHERS, NO. 74, 4TH MAIN, 7TH CROSS NEAR CHOWDESHWARI TEMPLE, KAVERINAGAR, MAHADEVAPURA, BENGALURU, KARNATAKA - 560048. and Published at BASAVESHWAR CIRCLE, 4TH CROSS, NEKAR NAGAR, HUBLI, OLD HUBLI, DHARWAD, KARNATAKA - 580024. Editor ASHWARYA PALLATE